|| ಸತ್ಯಮೇವಜಯತೇನಾನೃತಂ ||

ಬ್ರಹ್ಮಚರ್ಯ.

—: ಲೇಖಕ :—

ಹರ್ಡೀಕರ್ ಮಂಜಪ್ಪ.

ಸತ್ಯಾಗ್ರಹಾಶ್ರಮ, ಹರಿಹರ.

ಪ್ರಕಾಶಕ.

ಬೊಂಗಾಡೆ ದಾವಣಗೆರೆ.

ಕ್ಯಾಕ್ಸ್‌ಟರ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

ಕ್ರಿ-ಶ-...] ಕ್ರಯ ೧ ಆಣೆ. 3 ಕ್ಯೆ [ಶಾ-ಶ-೧೮೪೬

ಸಾಧುವರ್ಯ ಯೇಸುಕ್ರಿಸ್ತ.

ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರಮಾಡಿದವನಾದನು. ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸುಟುಬಿಡು. ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳಲ್ಲಿ ಒಂದು ಹೋಗುವುದು ನಿನಗೆ ಹಿತವಲ್ಲವೇ ?

ಶ್ರೀ ಸ್ವಾಮಿ ರಾಮತೀರ್ಥ.

ಮಿತ್ರರೇ ? ನೀವು ಯಾವಾಗ ಎಚ್ಚರಾಗುವಿರಿ ? ನಿಮಗೆ ಯಾವಾಗ ಬುದ್ಧಿ ಬರುವುದು ? ನೀವು ಹಾಳಾಗುವದಲ್ಲದೆ ನಿಮ್ಮ ದೇಹವೂ ಹಾಳಾಗುವಂತೆ ವೀರ್ಯವನ್ನು ವ್ಯರ್ಥವಾಗಿ ಕಳೆದುಕೊಳ್ಳಬೇಡಿರಿ.

|| ಸತ್ಯಮೇವಜಯತೇನಾನೃತಂ ||

ಗನೆಯ ಪ್ರಕರಣ.

ಬ್ರಹ್ಮಚರ್ಯದ ಮಹತ್ವ.

ಪ್ರಶ್ನೆ :—ಬ್ರಹ್ಮಚರ್ಯವೆಂದರೇನು ?

ಉತ್ತರ :—ಜನನೇಂದ್ರಿಯನಿಗ್ರಹ-ಎಂದರೆ, ವೀರ್ಯವನ್ನು ರಕ್ಷಿಸುವುದು ಬ್ರಹ್ಮಚರ್ಯವು.

ಪ್ರಶ್ನೆ :—ವೀರ್ಯವನ್ನು ಏಕೆ ರಕ್ಷಿಸಬೇಕು ?

ಉತ್ತರ :—ಈ ನಮ್ಮ ದೇಹವು ರಸ, ರಕ್ತ, ಮಾಂಸ, ನೆಣ, ಅಸ್ಥಿ, ಮಜ್ಜೆ ಮತ್ತು ವೀರ್ಯಗಳೆಂಬ ಸಪ್ತಧಾತುಗಳಿಂದ ಪೋಷಿಸಲ್ಪಡುತ್ತದೆ. ಆದುದರಿಂದ ನಾವು ಇವುಗಳನ್ನು ಚೆನ್ನಾಗಿ ಕಾಪಾಡಿದರೆ ಈ ದೇಹವು ಆರೋಗ್ಯವಾಗಿಯೂ, ಗಟ್ಟಿಯಾಗಿಯೂ, ಇರುತ್ತದೆ. ದೇಹವು ಗಟ್ಟಿಯಾಗಿದ್ದರೇನೇ ನಾವು ಜೀವಿಸುವೆವು. ಬಟ್ಟೆಯು ಹರಿದುಹೋಯಿತೆಂದರೆ ನಾವು ಹೇಗೆ ಅದನ್ನು ಬಿಟ್ಟುಬಿಡುತ್ತೇವೆಯೋ ಹಾಗೆಯೇ ಈ ದೇಹವು ಕೆಟ್ಟುಹೋಯಿತೆಂದರೆ ಜೀವವು ಇದನ್ನು ಬಿಟ್ಟುಹೋಗುತ್ತದೆ. ಅದೇ ಮರಣವು.

ಆದಕಾರಣ ನಾವು ಬದುಕುವುದಕ್ಕೆ ಈ ದೇಹವು ಗಟ್ಟಿಯಾಗಿರಬೇಕಾದುದು ಅತ್ಯಾವಶ್ಯಕವು. ದೇಹವು ಗಟ್ಟಿಯಾಗಿರಬೇಕಾದರೆ ರಸಾದಿ ಸಪ್ತಧಾತುಗಳನ್ನು ನಾವು ಚೆನ್ನಾಗಿ ರಕ್ಷಿಸಬೇಕು.

ನಾವು ಊಟಮಾಡುವ ಆಹಾರವು ಮೊದಲು ರಸವಾಗುತ್ತದೆ. ಆ ರಸವೇ ರಕ್ತವಾಗಿ ಆ ರಕ್ತದಿಂದ ಮಾಂಸ, ನೆಣ, ಮುಂತಾದವುಗಳುಂಟಾಗುತ್ತವೆ. ಆದಕಾರಣ ರಕ್ತವು ನಮ್ಮ ಆಹಾರದ ಸಾರವಾಗಿದೆ. **ಆಹಾರವು ರಕ್ತವಾಗಿ ಅದರಿಂದ ವೀರ್ಯವುಂಟಾಗಲು ಒಂದು ತಿಂಗಳು ಬೇಕಾಗುತ್ತದೆ.** ನಮ್ಮ ದೇಹದಲ್ಲುಂಟಾಗುವ ರಕ್ತವೆಲ್ಲಾ ವೀರ್ಯವಾಗುವುದಿಲ್ಲ. ರಕ್ತದಿಂದ ಮೊದಲು ಮಾಂಸಾದಿಗಳುಂಟಾಗಿ ಕಡೆಗೆ ವೀರ್ಯವಾಗುತ್ತದೆ. **ಒಂದು ಹನಿ ವೀರ್ಯವುಂಟಾಗಬೇಕಾದರೆ ನಾಲ್ವತ್ತು ಹನಿ ರಕ್ತವು ವೆಚ್ಚವಾಗುತ್ತದೆ.** ವೀರ್ಯವು ರಕ್ತಕ್ಕಿಂತ ನಾಲ್ವತ್ತು ಪಟ್ಟು ಹೆಚ್ಚಿನದಾಗಿದ್ದರೂ ರಕ್ತವು ಸುರಿದರೆ ನಾವು ಎಷ್ಟು ಭಯವನ್ನೂ ವ್ಯಸನವನ್ನೂ ಹೊಂದುತ್ತೇವೆಯೋ ಅಷ್ಟು ವೀರ್ಯನಾಶವಾದರೆ ಅಂಜುವುದಿಲ್ಲ. ಮತ್ತು ಪಶ್ಚಾತ್ತಾಪವನ್ನೂ ಪಡುವುದಿಲ್ಲ. ಏಕೆಂದರೆ, ವೀರ್ಯದ ಮಹತ್ವವೇ ನಮಗೆ ಚೆನ್ನಾಗಿ ತಿಳಿದಿಲ್ಲ. **ಡಾಕ್ಟರ್ ಹೆಪೊಕ್ರೈಟ್ಸ್** ಎಂಬ ಪ್ರಸಿದ್ಧಪಂಡಿತನು ಹೇಳಿರುವುದೇನೆಂದರೆ: –

“ವೀರ್ಯವು ರಕ್ತಮಾಂಸಾದಿಗಳಿಂದಸತ್ವವಾಗಿರುವುದರಿಂದ ಇದು ಇವೆಲ್ಲವುಗಳಿಗಿಂತಲೂ ಮಹತ್ವದ್ದಾಗಿದೆ. ಇಂಥ ವೀರ್ಯವನ್ನು ಹಾಳುಮಾಡಿಕೊಂಡರೆ ಜೀವಿತದ ಸ್ವಾರಸ್ಯವನ್ನೇ ಕಳೆದುಕೊಂಡಂತಾಗುವುದು”

ರಕ್ತವು ದೇಹದಲ್ಲಿ ಹರಿದಾಡುವುದಕ್ಕೆ ಹೇಗೆ ರಕ್ತನಾಳಗಳಿವೆಯೋ ಹಾಗೆಯೇ ವೀರ್ಯವು ಸಂಚರಿಸಲಿಕ್ಕೂ ವೀರ್ಯವಾಹಿನಿಗ

ಳಿವೆ. ಆದುದರಿಂದ ಸುಪ್ರಸಿದ್ಧ ಆಯುರ್ವೇದ ಗ್ರಂಥವಾದ ಚರಕ ಸಂಹಿತೆಯಲ್ಲಿ ಹೇಳಿರುವುದೇನೆಂದರೆ—**"ಎಳ್ಳಿನಲ್ಲಿ ಎಣ್ಣೆಯು ಹೇಗೆ ವ್ಯಾಪಿಸಿರುತ್ತದೆಯೋ ಹಾಗೆಯೇ ದೇಹದಲ್ಲಿ ವೀರ್ಯವು ವ್ಯಾಪಿಸಿರುತ್ತದೆ".** ಅನೇಕ ವೀರ್ಯವಾಹಿನಿಗಳು ಮೆದುಳಿಗೆ ಸಂಬಂಧವುಳ್ಳವುಗಳಾಗಿವೆ. ಆದಕಾರಣ ಬುದ್ಧಿಶಕ್ತಿಗೂ ವೀರ್ಯವು ಮುಖ್ಯ ಸಾಧನವಾಗಿದೆ. ಇಷ್ಟೇ ಅಲ್ಲ; ಕೆಲವು ಪ್ರಾಣಿಗಳು ವೀರ್ಯ ಪತನವಾದೊಡನೆಯೇ ಮರಣಹೊಂದುವುದನ್ನು ನೋಡಿದರೆ ಜೀವಧಾರಣೆಗೂ ವೀರ್ಯವು ಅವಶ್ಯಕವಾಗಿದೆಯೆಂದು ಗೊತ್ತಾಗುತ್ತದೆ.

ಈ ಪ್ರಕಾರ ವೀರ್ಯವು ದೇಹಾರೋಗ್ಯಕ್ಕೂ ಶರೀರ ದೃಢತೆಗೂ, ಬುದ್ಧಿಶಕ್ತಿಗೂ, ಮತ್ತು ಜೀವ ರಕ್ಷಣೆಗೂ, ಅವಶ್ಯಕವಾಗಿರುವುದರಿಂದ ವೀರ್ಯವನ್ನು ರಕ್ಷಿಸಲೇಬೇಕು.

ಪ್ರಶ್ನೆ—ವೀರ್ಯವನ್ನು ಎಷ್ಟು ಕಾಲ ರಕ್ಷಿಸಬೇಕು ?

ಉತ್ತರ—ಮನುಷ್ಯನು ವೀರ್ಯವನ್ನು ಎಂದೂ ನಾಶಮಾಡಬಾರದು. ಅದನ್ನು ಆತನು ಯಾವಾಗಲೂ ರಕ್ಷಿಸಲೇಬೇಕು. ಹಾಗೆ ಮಾಡಿದರೆ ಅದು ಯಾವಾಗಲೂ ಆತನನ್ನು ರಕ್ಷಿಸುವುದು. ಆದರೆ ಇದು ಕೇವಲ ಧ್ಯೇಯವಾಗಿರುವುದು ಸಾಧ್ಯವೇ ವಿನಾ ಆಚರಣೆಯಲ್ಲಿ ಬರುವುದು ಶಕ್ಯವಲ್ಲ. ವಿಷಯಾಪೇಕ್ಷೆಯಿಂದ ವೀರ್ಯವನ್ನು ಯಾವ ವಿಧದಲ್ಲಿಯೂ ಎಂದೂ ನಾಶಮಾಡದಿರುವುದೇ ಉತ್ತಮವಾದ ಬ್ರಹ್ಮಚರ್ಯವು. ಇದಕ್ಕೆ ನೈಷ್ಠಿಕ ಬ್ರಹ್ಮಚರ್ಯವೆಂದು ಹೇಳುತ್ತಾರೆ.

ಈ ವ್ರತವನ್ನು ಹಿಡಿಯುವುದು ಸಾಧ್ಯವಲ್ಲದಿದ್ದರೆ ಪುರುಷರು ೪೮ ವರ್ಷಗಳವರೆಗೂ, ಸ್ತ್ರೀಯರು ೨೪ ವರ್ಷಗಳವರೆಗೂ, ಜಿತೇಂದ್ರಿಯರಾಗಿರುವುದು ಮಧ್ಯಮ ಬ್ರಹ್ಮಚರ್ಯವು. ಇಷ್ಟು

ಕಾಲದವರೆಗೆ ಬ್ರಹ್ಮಚರ್ಯದಿಂದಿರುವುದು ಅಸಾಧ್ಯವೆಂದು ತೋರಿದರೆ ಪುರುಷರು ೨೫ ವರ್ಷಗಳವರೆಗಾದರೂ, ಸ್ತ್ರೀಯರು ೧೬ ವರ್ಷಗಳವರೆಗಾದರೂ, ಜಿತೇಂದ್ರಿಯರಾಗಿರಲೇಬೇಕು. ಏಕೆಂದರೆ ಸ್ತ್ರೀಪುರುಷರ ಸಕಲಾವಯವಗಳೂ ಸಂಪೂರ್ಣ ಸ್ಥಿತಿಗೆ ಬರಲು ಇಷ್ಟು ಕಾಲವು ಬೇಕೇಬೇಕಾಗುತ್ತದೆ. ಆ ಮುಂಚೆಯೇ ಬ್ರಹ್ಮಚರ್ಯವು ಭ್ರಷ್ಟವಾದರೆ ಎಲ್ಲಾ ಅವಯವಗಳ ಬೆಳವಣಿಗೆಯೂ ಕುಗ್ಗಿಹೋಗುತ್ತದೆ. ಆದಕಾರಣ **ಪುರುಷರು ೨೫ ವರ್ಷಗಳವರೆಗು ಸ್ತ್ರೀಯರು ೧೬ ವರ್ಷಗಳವರೆಗೂ ತಪ್ಪದೇ ಬ್ರಹ್ಮರ್ಯದಿಂದಿರಬೇಕು.** ಇದೇ ಕನಿಷ್ಠ ಬ್ರಹ್ಮಚರ್ಯವು.

ಪ್ರಶ್ನೆ—ಎಂದೂ ಲಗ್ನವಾಗದೆ ನೈಷ್ಠಿಕ ಬ್ರಹ್ಮಚರ್ಯದಿಂದಿರುವುದು ಸೃಷ್ಟಿಯ ನಿಯಮಕ್ಕೆ ವಿರೋಧವಾದದ್ದಲ್ಲವೇ? ಈ ಪ್ರಪಂಚದಲ್ಲಿ ಜನ್ಮವೆತ್ತಿದ ಪ್ರತಿಯೊಂದು ಪ್ರಾಣಿಯೂ ತನ್ನಂತಹ ಮತ್ತೊಂದು ಪ್ರಾಣಿಯನ್ನುಂಟುಮಾಡುತ್ತಲೇ ಜೀವಿಸುತ್ತಾ ಇಲ್ಲವೇ? ಆದಕಾರಣ ಮನುಷ್ಯರು ಕೂಡಾ ಸಂತಾನವನ್ನುಂಟುಮಾಡಬೇಕಾದುದೇ ಧರ್ಮವಾಗಿಲ್ಲವೇ? ಎಲ್ಲರೂ ನೈಷ್ಠಿಕ ಬ್ರಹ್ಮಚಾರಿಗಳಾದರೆ ಈ ಪ್ರಪಂಚದಲ್ಲಿ ಜನರೇ ಇಲ್ಲದಂತಾಗುವುದಿಲ್ಲವೇ?

ಉತ್ತರ—ನಿಮ್ಮ ಪ್ರತಿಪಾದನೆಯು ಸಮಂಜಸವಾಗಿಲ್ಲ. ಏಕೆಂದರೆ, ನೀವು ಮನುಷ್ಯನನ್ನು ಇನ್ನಿತರಪ್ರಾಣಿಗಳಪಂಗ್ತಿಯಲ್ಲಿಯೇ ಸೇರಿಸಿದಿರಿ. ಮನುಷ್ಯನು ಕೂಡಾ ಅನ್ಯಪ್ರಾಣಿಗಳಂತೆಯೇ ಆಹಾರ, ನಿದ್ರೆ, ಭಯ, ಮೈಥುನಗಳಿಗೆಯೇ ಅಧೀನನಾಗಿಯೇ ಇರಬೇಕೆಂದು ನೀವು ಹೇಳಿದಂತಾಯಿತು. ಬೇರೆ ಪ್ರಾಣಿಗಳಂತೆಯೇ ಆಚರಿಸಿದರೆ ಮನುಷ್ಯನು ಅವುಗಳಿಗಿಂತ ಹೇಗೆ ಶ್ರೇಷ್ಠನಾಗುತ್ತಾನೆ? ಮನುಷ್ಯನು ತಾನು ಇತರ ಪ್ರಾಣಿಗಳಿಗಿಂತಲೂ ಹೆಚ್ಚಿನವನಾಗಬೇಕಾದರೆ ಸ್ವಭಾವಜನ್ಯವಾಗಿರುವ ಆಹಾರ, ನಿದ್ರೆ, ಭಯ ಮತ್ತು ಮೈಥುನಗಳನ್ನು

ನಿರೋಧಿಸಬೇಕಾದುದು ವಿಹಿತವಲ್ಲವೇ ? ಅವುಗಳನ್ನು ಜಯಿಸಿದಾಗಲೇ ಮನುಷ್ಯನು ಬೇರೆ ಪ್ರಾಣಿಗಳಲ್ಲಿಯೇ ಅಲ್ಲ; ಮನುಷ್ಯಕೋಟಿಯಲ್ಲಿಯೂ ಶ್ರೇಷ್ಠನಾಗುತ್ತಾನೆ.

ಯಾವ ಪ್ರಮಾಣದಿಂದ ಆಹಾರಾದಿ ಈ ನಾಲ್ಕು ಕಾರ್ಯಗಳನ್ನೂ ಮನುಷ್ಯತ್ವವು ತಡೆಯುತ್ತಾ ಬರುತ್ತಾನೆಯೋ ಅಪ್ರಮಾಣದಂತೆ ಆತನಲ್ಲಿ ಮನುಷ್ಯತ್ವವು ಹೆಚ್ಚುತ್ತಾ ಬರುತ್ತದೆ. ಹಾಗೆ ಮಾಡದೆ ಯಾವ ಪ್ರಮಾಣದಿಂದ ಆಹಾರ,ನಿದ್ರೆ, ಭಯ ಮತ್ತು ಮೈಥುನಗಳಿಗೆ ಮನುಷ್ಯನು ಈಡಾಗುತ್ತಾ ಹೋಗುತ್ತಾನೆಯೋ ಆ ಪ್ರಮಾಣದಂತೆ ಆತನಲ್ಲಿ ಪಶುತ್ವವು ಹೆಚ್ಚುತ್ತಾ ಬರುತ್ತದೆ. ಮನುಷ್ಯನು ತನ್ನ ಜ್ಞಾನ ಶಕ್ತಿಯಿಂದ ಇವುಗಳನ್ನು ತಡೆಯಲು ಸಮರ್ಥನಾಗಿದ್ದಾನೆ. ಆದರೆ ಮನುಷ್ಯೇತರ ಪ್ರಾಣಿಗಳಿಗೆ ಇಂಥ ಶಕ್ತಿಯಿಲ್ಲ. ಆದಕಾರಣ ಅವು ಮೈಥುನ ಕ್ರಿಯೆಗೀಡಾಗುತ್ತವೆ. ಆ ಅಜ್ಞಪ್ರಾಣಿಗಳಂತೆಯೇ ಮನುಷ್ಯನೂ ಆಚರಿಸುವುದು ವಿಹಿತವೇ ?

ಮನುಷ್ಯನು ಜಿತೇದ್ರಿಯನಾದಾಗಲೇ ಆತ್ಮ ಪ್ರಭೆಯು ಹೊರಸೂಸುತ್ತದೆ. ಬ್ರಹ್ಮಜ್ಞಾನಿಯಾಗಿ ಬ್ರಹ್ಮನಲ್ಲಿ ಲೀನವಾಗುವುದೇ ಮನುಷ್ಯನ ಮುಖ್ಯ ಧ್ಯೇಯವಷ್ಟೆ ? ಈ ನೈಷ್ಠಿಕ ಬ್ರಹ್ಮಚರ್ಯವಾದರೋ ಆ ಧ್ಯೇಯವನ್ನು ಸಾಧಿಸಲು ಮುಖ್ಯ ಸಾಧನವಾಗಿದೆ. ಹೀಗಿರುವಾಗ ಇದು ಅಧರ್ಮವಾದುದೆಂದು ಹೇಳಬಹುದೇ ? ನೈಷ್ಠಿಕ ಬ್ರಹ್ಮಚಾರಿಗಳಾದರೆ ಪ್ರಪಂಚವು ನಿರ್ಜನಪ್ರದೇಶವಾಗುತ್ತದೆಂದು ನೀವು ಬಹು ಭಯಪಡುತ್ತಿರುವಿರಷ್ಟೆ. ಎಲ್ಲರೂ ಅಂಥ ಬ್ರಹ್ಮಚಾರಿಗಳಾಗುವುದು ಎಂದೆಂದಿಗೂ ಸಾಧ್ಯವಲ್ಲ. ಒಂದು ವೇಳೆ ಆದರೆಂದು ಭಾವಿಸಿದರೆ ಅದರಿಂದಾದ ನಷ್ಟವೇನು ? ಎಲ್ಲರೂ ಮೋಕ್ಷಹೊಂದಿದರೆ ಪ್ರಪಂಚವು ನಿರ್ಜನ ಪ್ರದೇಶವಾಗುವುದೆಂದು ಮೋಕ್ಷಮಾರ್ಗವನ್ನು ಬೋಧಿಸಬಾರದೇ ?

ಪ್ರಶ್ನೆ:—ಈ ವರೆಗೆ ಯಾರಾದರೂ ಇಂಥ ನೈಷ್ಠಿಕ ಬ್ರಹ್ಮ ಚರ್ಯ ವ್ರತವನ್ನಾಚರಿಸಿರುವರೇ?

ಉತ್ತರ:—ಅಸಂಖ್ಯ ಜನರು ಈ ಪವಿತ್ರತರವಾದ ವ್ರತವನ್ನಾಚರಿಸಿದ್ದಾರೆ. ಹನುಮಂತದೇವರು, ಭೀಷ್ಮಾಚಾರ್ಯರು, ಶಂಕರಾಚಾರ್ಯರು, ಚನ್ನ ಬಸವಣ್ಣನವರು, ರಾಮದಾಸರು, ದಯಾನಂದಸರಸ್ವತಿಗಳು, ವಿವೇಕಾನಂದರು, ಯೇಸುಕ್ರೈಸ್ತರು, ನ್ಯೂಟನ್, ಹರ್ಬರ್ಟ್‌ಸ್ಪೆನ್ಸರ್, ಕ್ಯಾಂಟ್, ಮೊದಲಾದ ಮಹಾ ಶೂರರೂ ಜ್ಞಾನಿಗಳೂ ನೈಷ್ಠಿಕ ಬ್ರಹ್ಮಚಾರಿಗಳೇ ಆಗಿದ್ದರು.

ಪ್ರಶ್ನೆ:—ಶ್ರೀರಾಮಚಂದ್ರ, ಬುದ್ಧದೇವ, ಬಸವಣ್ಣ, ತುಕಾರಾಮ, ಸ್ವಾಮಿ ರಾಮತೀರ್ಥ, ಮಹಾತ್ಮ ಗಾಂಧಿ, ಸಾಕ್ರೆಟೀಸ, ನೆಪೋಲಿಯನ್, ಮೊದಲಾದ ಅಸಂಖ್ಯ ಮಹನೀಯರು ವಿವಾಹಿತರಾಗಿದ್ದರೂ ನೈಷ್ಠಿಕ ಬ್ರಹ್ಮಚಾರಿಗಳಂತೆಯೇ ಅದ್ವಿತೀಯವಾದ ಪರಾಕ್ರಮವನ್ನೂ, ಅಸಾಧಾರಣವಾದ ಆತ್ಮಜ್ಞಾನವನ್ನೂ. ಹೊಂದಲಿಲ್ಲವೇ? ಆದಕಾರಣ ಬ್ರಹ್ಮಚರ್ಯಕ್ಕೂ ಶೂರತ್ವಕ್ಕೂ ಅಥವಾ ಆತ್ಮಜ್ಞಾನಕ್ಕೂ ಸಂಬಂಧವೇನು?

ಉತ್ತರ:—ನೀವು ನನ್ನ ಅಭಿಪ್ರಾಯವನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲ. ಲಗ್ನವಾಗದಿದ್ದ ಮಾತ್ರಕ್ಕೆ ವೀರ್ಯವನ್ನು ಸಂಪೂರ್ಣ ರಕ್ಷಿಸಿದಂತಾಗಲಿ, ಅಥವಾ ವಿವಾಹವಾದ ಮಾತ್ರದಲ್ಲಿ ವೀರ್ಯವನ್ನು ಸಂಪೂರ್ಣಭ್ರಷ್ಟಗೊಳಿಸಿದಂತಾಗಲಿ, ಆಗಲಿಲ್ಲ. ಲಗ್ನವಾಗದಿದ್ದರೂ ಹೇಗೆ ವೀರ್ಯವು ನಾಶವಾಗಬಹುದೋ ಹಾಗೆಯೇ ವಿವಾಹವಾಗಿದ್ದರೂ ವೀರ್ಯವು ರಕ್ಷಿಸಲ್ಪಡಬಹುದು. ವೀರ್ಯ ರಕ್ಷಣೆಯು ಮುಖ್ಯವೇ ವಿನಾ ವಿವಾಹವಾಗುವುದಾಗಲಿ, ಅಥವಾ ಆಗದಿರುವುದಾಗಲಿ ಮುಖ್ಯವಲ್ಲ.

ಶ್ರೀ ಸ್ವಾಮಿ ರಾಮತೀರ್ಥರವರೇ ಹೇಳಿರುವುದೇನೆಂದರೆ—"ಇಂದ್ರಜಿತುನನ್ನು ಕೊಲ್ಲಲು ಶ್ರೀರಾಮಚಂದ್ರನು ಸಮರ್ಥನಾಗಲಿಲ್ಲ. ಏಕೆಂದರೆ ೧೨ ವರುಷಗಳವರೆಗೆ ತ್ರಿಕರಣಶುದ್ಧವಾಗಿಯೂ ಬ್ರಹ್ಮಚರ್ಯವ್ರತದಿಂದಿದ್ದವರೇ ಇಂದ್ರಜಿತನನ್ನು ಕೊಲ್ಲಲು ಸಮರ್ಥರಾಗಿದ್ದರು. ಆದುದರಿಂದ ಈ ಕಾರ್ಯವನ್ನು ಲಕ್ಷ್ಮಣನು ಮಾಡಬೇಕಾಯಿತು. ಪೃಥ್ವಿರಾಜನು ಯಾವ ಕಡೆಯ ಯುದ್ಧದಲ್ಲಿ ಅಪಜಯವನ್ನು ಹೊಂದಿದನೋ ಆ ಯುದ್ಧಕ್ಕೆ ಹೋಗುವ ಮುಂಚೆ ವೀರ್ಯಭ್ರಷ್ಟನಾಗಿ ತನ್ನ ಪತ್ನಿಯಿಂದ ನಡುಕಟ್ಟನ್ನು ಕಟ್ಟಿಸಿಕೊಂಡಿದ್ದನು. ರಣವೀರನಾದ ನೆಪೋಲಿಯನ್ನನು ಯಾವ ಯುದ್ಧದಲ್ಲಿ ಕೊನೆಗೆ ಸೋತನೋ ಆ ಯುದ್ಧಕ್ಕೆ ಹೋಗುವ ಪೂರ್ವದಲ್ಲಿ ಆತನ ಶುಭ್ರ ರಕ್ತವು ಅಧಃ ಪತನವಾಗಿದ್ದಿತು. ಮಹಾ ಪರಾಕ್ರಮಶಾಲಿಯಾದ ಅಭಿಮನ್ಯು ರಣರಂಗದಲ್ಲಿ ಮರಣಹೊಂದಿದ ಹಿಂದಿನ ದಿವಸ ಕ್ಷತ್ರಿಯ ಬೀಜವನ್ನು ಬಿತ್ತಿ ಬಂದಿದ್ದನು.''

ಈ ಎಲ್ಲಾ ದೃಷ್ಟಾಂತಗಳಿಂದ ವೀರ್ಯವು ದೇಹಶಕ್ತಿಗೆ ಸಂಬಂಧವಿದೆಯೆಂದು ಸಿದ್ಧವಾಗುವುದಿಲ್ಲವೇ? ಭಗವಾನ್ ಬುದ್ಧ, ಮಹಾತ್ಮ ಗಾಂಧಿ ಮೊದಲಾದ ಮಹಾ ಮಹಾ ಜ್ಞಾನಿಗಳು ವಿವಾಹಿತರಾಗಿದ್ದರೂ ಅವರು ವಿಷಯ ಲೋಲುಪ್ತರಾಗಿ ವೀರ್ಯಭ್ರಷ್ಟರಾದಾಗ ಮಹಾಜ್ಞಾನಿಗಳಾಗಿರಲಿಲ್ಲ. ಪತ್ನಿಯನ್ನು ಬಿಟ್ಟಾಗಲಿ ಅಥವಾ ಅವಳಲ್ಲಿ ವ್ಯಾಮೋಹವನ್ನು ತೊರೆದಾಗಲಿ ವೀರ್ಯವನ್ನು ರಕ್ಷಿಸಿ ಜಿತೇಂದ್ರಿಯರಾದಾಗಲೇ ಮಹಾ ಜ್ಞಾನಿಗಳಾದರು. **ಮನುಷ್ಯನು ವಿವಾಹಿತನಾಗಿರಲಿ, ಅಥವಾ ಅವಿವಾಹಿತನಾಗಿರಲಿ, ಆತನು ವೀರ್ಯವನ್ನು ರಕ್ಷಿಸಿ ಚಿತ್ತಸ್ಥಿರತೆಯಿಂದ ಜಿತೇಂದ್ರಿಯನಾದವಿನಾ ಪರಾಕ್ರಮಶಾಲಿಯಾಗಲಿ, ಅಥವಾ ಆತ್ಮ ಜ್ಞಾನಿಯಾಗಲಿ ಆಗುವುದು ಸಾಧ್ಯವೇ ಅಲ್ಲ.**

೨ನೆಯ ಪ್ರಕರಣ.

ವೀರ್ಯನಾಶದಿಂದಾಗುವ ಕೇಡು.

ಪ್ರಶ್ನೆ—ಜನರು ಈಗ ವೀರ್ಯವನ್ನು ಯಾವ ಯಾವ ರೀ ಯಲ್ಲಿ ಹಾಳುಮಾಡಿಕೊಳ್ಳುತ್ತಿದ್ದಾರೆ? ಆದರಿಂದ ಯಾವ ಕೇಡ ಗಳಾಗುತ್ತಲಿವೆ?

ಉತ್ತರ—ಅಯ್ಯೋ! ಅನೇಕ ರೀತಿಗಳಿಂದ ವೀರ್ಯವನ್ನು ಹಾಳುಮಾಡಿಕೊಂಡು ನಾನಾ ದುಃಖಗಳಿಂದ ಬಳಲುತ್ತಿದ್ದಾರೆ ವೀರ್ಯನಾಶಕ್ಕೆ ಮುಷ್ಟಿಮೈಥುನ, ವ್ಯಭಿಚಾರ, ಬಾಲ್ಯವಿವಾಹ ಸ್ವಪ್ನಾವಸ್ಥೆ, ಅತಿ ಸಂಭೋಗ ಇವೇ ಮೊದಲಾದ ದುರಭ್ಯಾ ಗಳು ಕಾರಣವಾಗಿವೆ.

ಪ್ರಶ್ನೆ—ಮುಷ್ಟಿಮೈಥುನದಿಂದ ಯಾವ ಯಾವ ಕೇಡು ಳಾಗುತ್ತವೆ?

ಉತ್ತರ—ಈ ಕೆಟ್ಟ ಚಾಳಿಯಿಂದ ಭಯಂಕರವಾದ ಅಪಾ ಯವಾಗುತ್ತದೆ. ಅನೇಕ ಹುಡುಗರು ೧೨–೧೪ ವರ್ಷಗಳಲ್ಲಿಯೆ ಈ ದುರಭ್ಯಾಸಕ್ಕೊಳಗಾಗುವುದುಂಟು. ಕೆಟ್ಟ ಹುಡುಗರೇ ಚಾಳಿಯನ್ನು ಕಲಿಸುವುದು ಹೆಚ್ಚು. ಮೊದಲು ಮೊದಲು ಅವರಿ ಯಾವ ಅಪಾಯವೂ ತೋರುವುದಿಲ್ಲ. ದಿನೇ ದಿನೇ ಆ ಕೆಟ ಚಾಳಿಯು ಹೆಚ್ಚುತ್ತಾಹೋಗಿ ದೇಹಶಕ್ತಿಯನ್ನು ಕಡಿಮೆಮಾ

ತ್ತದೆ. ಆಗ ಬೆಳೆಯುವ ಗಿಡಕ್ಕೆ ಹುಳ ಹಿಡಿದಂತೆಯೇ ಸರಿ. ದೇಹದ ಬೆಳವಣಿಗೆಯೇ ಕುಗ್ಗಿಹೋಗುತ್ತದೆ. ಎದೆ ಗೂಡು ಕಟ್ಟುತ್ತದೆ. ಕಣ್ಣುಗಳು ಒಳಗೆ ಹೋಗುತ್ತವೆ. ಪಚನಶಕ್ತಿಯು ಕಡಿಮೆಯಾಗಿ ಮಲಬದ್ಧತೆಯಿಂದ ತಲೆಶೂಲೆಯು ಆಗಾಗ್ಗೆ ಹೆಚ್ಚುತ್ತದೆ. ಜ್ಞಾಪಕ ಶಕ್ತಿಯು ಕಡಿಮೆಯಾಗುತ್ತದೆ. ದೃಷ್ಟಿಯು ಮಂದವಾಗುತ್ತದೆ. ಈ ಪ್ರಕಾರ ಯೌವನ ಕಾಲದಲ್ಲಿಯೇ ಮುಪ್ಪಿನ ಲಕ್ಷಣಗಳು ತೋರುತ್ತವೆ. ಗಾಣಕ್ಕೆ ಕೊಟ್ಟ ಕಬ್ಬಿನಂತೆ ನಿಸ್ಸಾರವಾಗಿ ಹೋಗುತ್ತಾರೆ.

ಈ ಕಾಲದಲ್ಲಿ ಈ ಕೆಟ್ಟ ಚಾಳಿಯಿಂದ ಬಹು ಹುಡುಗರು ಬಳಲುತ್ತಾರೆ. ಅಯ್ಯೋ! **ಮನುಷ್ಯನ ವಿನಾ ಇನ್ನಾವ ಪ್ರಾಣಿಯೂ ಈ ಘೋರ ಪಾಪ ಕಾರ್ಯವನ್ನು ಮಾಡುವುದಿಲ್ಲ.** ಅಸಂಖ್ಯ ಬಾಲಕರು ಮತ್ತು ಯುವಕರು ತಮ್ಮ ತಮ್ಮ ಕೈಯಿಂದಲೇ ತಮ್ಮ ಜೀವಮಾನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಪವಿತ್ರ ಹಸ್ತವನ್ನು ಅಪವಿತ್ರ ಕಾರ್ಯಕ್ಕುಪಯೋಗಿಸಿ ದುಃಖಕ್ಕೀಡಾಗುತಿದ್ದಾರೆ. ಆದಕಾರಣ ಈ ಚಾಳಿಗೀಡಾಗಿರುವವರು **ಸ್ವಾಮಿ ವರ್ಯ ಯೇಸುಕ್ರಿಸ್ತನು** ಹೇಳಿರುವ ಈ ಕೆಳಗಿನ ವಾಕ್ಯಾಭಿಪ್ರಾಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಲಿ. **"ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದು ಬಿಸಾಟಬಿಡು. ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳಲ್ಲಿ ಒಂದು ಹೋಗುವುದು ನಿನಗೆ ಹಿತವಲ್ಲವೆ?"** ಪಾಪ! ಇವರಿಗೆ ಅದರಿಂದಾಗುವ ಕೇಡುಗಳು ಗೊತ್ತಿರುವುದಿಲ್ಲ. ಮುಂದೆ ಅವರು ಸಂಸಾರಭಾರವನ್ನು ವಹಿಸಲು ಕೂಡಾ ಅಸಮರ್ಥರಾಗುತ್ತಾರೆ. ಕೊನೆಗೆ ಅವರಿಗೆ ತಮ್ಮ ಜೀವಿತವೇ ಬಹು ಭಾರವಾಗಿ ಪರಿಣಮಿಸುತ್ತದೆ. ಅನೇಕರು ಅಕಾಲದಲ್ಲಿಯೇ ಮೃತ್ಯುವಿಗೆ ತುತ್ತಾಗುತ್ತಾರೆ. ಕೆಲವರು ಕ್ಷಯರೋಗಕ್ಕೆ ಆಹುತಿಯಾಗುತ್ತಾರೆ.

ಕೆಲವರಿಗೆ ಹುಚ್ಚು ಹಿಡಿಯುವುದುಂಟು. ಈ ಪ್ರಕಾರ ನಾನಾ ಕೇಡುಗಳಿಂದ ಅವರ ಜೀವಿತವೇ ಹಾಳಾಗಿ ಹೋಗುತ್ತದೆ.

ಪ್ರಶ್ನೆ—ವ್ಯಭಿಚಾರವು ಯುವಕರಲ್ಲಿ ಹೆಚ್ಚಾಗಿಲ್ಲವೇ? ಅದ ರಿಂದ ಅವರಿಗೆ ಹೆಚ್ಚು ಕೇಡುಗಳಾಗುವುದಿಲ್ಲವೇ?

ಉತ್ತರ—ಮುಷ್ಟಿ ಮೈಥುನವು ಗುಪ್ತರೀತಿಯಲ್ಲಿ ಏಕಾಂ ಗಿಯಾಗಿ ಆಚರಿಸಲವಕಾಶವಿರುವುದರಿಂದ ಈ ದುಷ್ಟ ಚಾಳಿಗೀಡಾ ಗುವಷ್ಟು ವ್ಯಭಿಚಾರಕ್ಕೆ ತರುಣರು ಹೋಗುವುದಿಲ್ಲ. ಇಪ್ಪತ್ತೈದು ವರ್ಷಗಳಿಗೆ ಮೇಲ್ಪಟ್ಟವರಲ್ಲಿಯೇ ವ್ಯಭಿಚಾರವು ಹೆಚ್ಚು. **ವೀರ್ಯವು ಯಾವರೀತಿಯಿಂದ ನಾಶವಾದರೂ ಉಂಟಾಗುವ ಕೇಡು ಗಳು ಮಾತ್ರ ಸ್ವಲ್ಪ ಹೆಚ್ಚುಕಡಿಮೆ ಒಂದೇ ರೀತಿಯಲ್ಲಿರು** ತ್ತವೆ. ವ್ಯಭಿಚಾರದಿಂದ ಕೂಡಲೇ ಹೆಚ್ಚಾದ ಅಪಾಯವಾಗುತ್ತದೆ. ಈ ಮುಂಚೆ ಹೇಳಿದ ಕೇಡುಗಳಲ್ಲದೆ ಬಹು ಭಯಂಕರವಾದ ಗರ್ಮಿ ರೋಗವೂ ಈ ವ್ಯಭಿಚಾರಗಳ ಬೆನ್ನು ಹತ್ತುತ್ತದೆ. ಯಾವಾಗಲೂ ಒಂದಲ್ಲೊಂದು ಬೇನೆಯಿಂದ ನರಳಬೇಕಾಗುತ್ತದೆ. ಇದರಿಂದ ಮಾನಹಾನಿ ಮತ್ತು ಧನಹಾನಿಗಳಾಗುವುದಲ್ಲದೆ ಅಕಾಲದಲ್ಲಿಯೇ ಪ್ರಾಣಹಾನಿಯೂ ಸಂಭವಿಸುತ್ತದೆ.

ವ್ಯಭಿಚಾರಿಗಳು ಮುಂದೆ ಲಗ್ನವಾದರೆ ಅಥವಾ ಲಗ್ನವಾಗಿ ದ್ದರೆ ನಿರಪರಾಧಿಯಾದ ಅವರ ಪತ್ನಿಯೂ ಆ ಭಯಂಕರ ರೋಗ ದಿಂದ ನರಳಬೇಕಾಗುತ್ತದೆ. ಈ ರೋಗಗಳಿಗೆ ಪ್ರಾಯಶಃ ಸಂತಾ ನವಾಗುವುದೇ ಇಲ್ಲ. ಒಂದುವೇಳೆ ಆದರೆ ಆ ಮಕ್ಕಳು ಚಿಕ್ಕಂದಿ ನಿಂದಲೂ ರೋಗದಿಂದ ಬಳಲಬೇಕಾಗುತ್ತದೆ. ಈ ಪ್ರಕಾರ ವ್ಯಭಿ ಚಾರವು ಅವರಿಗೆ ಮಾತ್ರ ಅಪಾಯವನ್ನುಂಟುಮಾಡದೆ ಅವರ ವಂಶಕ್ಕೂ ಮಹತ್ತರವಾದ ಕೇಡನ್ನುಂಟುಮಾಡುತ್ತದೆ. ಇದು ಇಷ್ಟು ಭಯಂ

ಕರವಾದುದಾಗಿರುವುದರಿಂದಲೇ **ಮಹಾತ್ಮ ಗಾಂಧಿಯವರು** ಹೇಳಿರುವುದೇನೆಂದರೆ:—

" ಪರಸ್ತ್ರೀ ಗಮನಕ್ಕಿಂತ ಆತ್ಮಹತ್ಯವು ಸಹಸ್ರಪಟ್ಟು ಮೇಲಾದದ್ದಾಗಿದೆ. "

ಪ್ರಶ್ನೆ—ಬಾಲ್ಯದಲ್ಲಿಯೇ ಲಗ್ನ ಮಾಡಿಬಿಟ್ಟರೆ ಈ ಎರಡೂ ಕೇಡುಗಳು ನಿಲ್ಲುವುದರಿಂದ ಬಾಲ್ಯ ವಿವಾಹವು ಯುಕ್ತವಾದದ್ದಲ್ಲವೇ ?

ಉತ್ತರ—ನಿಮ್ಮ ಯೋಜನೆಯು ಸರಿಯಾದುದಲ್ಲ. ಬಾಲ್ಯದಲ್ಲಿಯೇ ಲಗ್ನಮಾಡಿದರೆ ಈ ಎರಡೂ ದುರಭ್ಯಾಸಗಳು ಒಂದು ವೇಳೆ ನಿಲ್ಲಬಹುದು. ಆದರೆ ಅದರಿಂದ ವೀರ್ಯರಕ್ಷಣೆಯನ್ನು ಮಾಡಿದಂತಾಯಿತೇ ? ವೀರ್ಯನಾಶಕ್ಕೆ ಬೇರೊಂದುಪಾಯವನ್ನು ಕಲ್ಪಿಸಿಕೊಟ್ಟಂತಾಗಲಿಲ್ಲವೇ ? ಕೂಸು ಎಲ್ಲಿಯಾದರೂ ಹೋಗಿ ಬಿದ್ದು ಕಾಲು ಮುರಿದುಕೊಂಡೀತೆಂದು ನಡೆಯಲಿಕ್ಕೆ ಬಾರದಂತೆ ಮೊದಲೇ ಆ ಕೂಸಿನ ಕಾಲನ್ನು ಮುರಿಯುವುದು ಯುಕ್ತವೇ ? ನೀವು ಹೇಳುವ ಬಾಲ್ಯವಿವಾಹದ ಉಪಾಯವು ಇದರಂತೆಯೇಸರಿ.

ಬಾಲ್ಯವಿವಾಹದಿಂದ ಚಿಕ್ಕಂದಿನಲ್ಲಿಯೇ ವೀರ್ಯನಾಶವಾಗಲಾರಂಭವಾಗುತ್ತದೆ. ಆಗ ವೀರ್ಯನಾಶದಿಂದಾಗುವ ಎಲ್ಲಾ ಕೇಡುಗಳೂ ಆ ಬಾಲಪತಿಯ ಬೆನ್ನು ಹತ್ತುತ್ತವೆ. ಸ್ವಲ್ಪ ದಿವಸಗಳಲ್ಲಿಯೇ ಆತನು ನಿರ್ವೀರ್ಯನಾಗಿ ಕಂದಿ ಕುಂದಿ ಹೋಗುತ್ತಾನೆ. ೧೫-೧೬ ವರ್ಷಗಳ ಪತಿ ೧೨-೧೩ ವರ್ಷಗಳ ಸತಿ ಇಂಥ ದಂಪತಿಗಳಿಂದ ಜನಿಸುವ ಮಕ್ಕಳು ಹೇಗಿರಬಹುದು ? ಆ ಕೂಸುಗಳಿಗೆ ಗಟ್ಟಿಯಾಗಿ ಅಳುವುದಕ್ಕೆ ಕೂಡಾ ಶಕ್ತಿಯಿರುವುದಿಲ್ಲ. ಈ ದೇಶಕ್ಕೆ ೧೦೦ಕ್ಕೆ ೪೬ ಕೂಸುಗಳು ಎರಡು ವರ್ಷ ತುಂಬು

ವುದರೊಳಗಾಗಿಯೇ ಮರಣ ಹೊಂದುವುದಕ್ಕೆ ಈ ಬಾಲ್ಯ ವಿವಾ
ಹವೂ ಒಂದು ಮುಖ್ಯ ಕಾರಣವಾಗಿದೆ.

ಈ ವಿಷಯದಲ್ಲಿ **ಮಹಾತ್ಮ ಗಾಂಧಿಯವರು** ಹೇಳಿರುವು
ದೇನೆಂದರೆ:—'**ಹನ್ನೆರಡು ವರ್ಷಗಳ ಬಾಲಕಿಗೆ ಮಕ್ಕ
ಳಾದರೆ ನಾವೇಕೆ ಸಂತೋಷಪಡಬೇಕು ? ಅದು ದೇವರ
ಮಹಾ ಕೋಪವೆಂದೇಕೆ ತಿಳಿಯಬಾರದು ? ಬಾಲಸ್ತ್ರೀಯ
ಳಿಗೆ ಬಾಲಪತಿಯಿಂದಾಗುವ ಬಲಹೀನ ಸಂತತಿಯು ಇರು
ವೆಗಳಂತೆ ಹಿಂದುಸ್ಥಾನದಲ್ಲಿ ಎಷ್ಟು ಹೆಚ್ಚಿದರೇನು ಫಲ ?
ಅದರಿಂದ ಹಿಂದುಸ್ಥಾನಕ್ಕಾಗಲಿ, ಅಥವಾ ಜಗತ್ತಿಗಾಗಲಿ
ಯಾವ ಪ್ರಯೋಜನವುಂಟು ?**'

ಆದಕಾರಣ ಬಾಲ್ಯವಿವಾಹವು ಯಾವ ಕಾರಣದಿಂದಲೂ
ಯುಕ್ತವಾದುದಲ್ಲ. ತಾಯಿ ತಂದೆಗಳು ತಮ್ಮ ಮುದ್ದು ಮಕ್ಕ
ಳನ್ನು ಚಿಕ್ಕಂದಿನಲ್ಲಿಯೇ ವಿಷಯೋಪಭೋಗಕ್ಕೆ ಹಚ್ಚಿ ಅವರ ಜೀವಿತ
ವನ್ನೇ ದುಃಖಕ್ಕೀಡುಮಾಡುವ ಘೋರ ಪಾಪವು ಇನ್ನು ಮೇಲೆ
ನಿಲ್ಲಲಿ. ತಾವು ಇರುವಾಗಲೇ ನಾಲ್ಕು ಅಕ್ಕಿಯ ಕಾಳುಗಳನ್ನು
ಮಕ್ಕಳ ತಲೆಯಮೇಲೆ ಹಾಕಿ ಕಣ್ಣು ತುಂಬಾ ನೋಡೋಣವೆಂಬ
ತಾಯಿತಂದೆಗಳ ಮೋಹವು ಅಳಿದುಹೋದಲಿ. **ಮಹಾತ್ಮರು** ಹೇಳಿ
ರುವುದೇನೆಂದರೆ:—

''ನನ್ನ ಲಗ್ನವು ಚಿಕ್ಕಂದಿನಲ್ಲಿಯೇ ಆಯಿತು. ಚಿಕ್ಕ ಪ್ರಾಯ
ದಲ್ಲಿಯೇ ನಾನು ಕಾಮಾಂಧನಾದೆನು. ತರುಣಾವಸ್ಥೆಯಲ್ಲಿಯೇ
ಪಿತೃಸ್ಥಾನವನ್ನು ವಹಿಸಿದೆನು. ಇಂಥ ಘೋರ ಅಂಧಕಾರದಲ್ಲಿ
ಬಳಲುತ್ತ ಕೆಲವುಕಾಲ ಕಳೆದನಂತರ ಪೂರ್ವ ಸಂಸ್ಕಾರದಿಂದ ಎಚ್ಚ
ತ್ತೆನು. ನನ್ನ ಮುಂದಿದ್ದ ಕಗ್ಗತ್ತಲೆಯನ್ನು ಕಂಡೆನು. ಆದರಿಂದ

ಪಾರಾಗಲು ವೀರ್ಯರಕ್ಷಣೆಯೇ ಉತ್ತಮೋತ್ತಮವಾದ ಉಪಾಯವೆಂದು ಮನಗಂಡೆನು.'

ಪ್ರಶ್ನೆ—ತರುಣರು ಈ ಮೂರು ಗಂಡಾಂತರಗಳಿಂದ ಪಾರಾದರೆ ವೀರ್ಯವು ತಾನಾಗಿಯೇ ರಕ್ಷಿಸಲ್ಪಡುವುದಷ್ಟೆ.

ಉತ್ತರ—ಇಲ್ಲ. ಇನ್ನೊಂದು ರೀತಿಯಿಂದಲೂ ವೀರ್ಯನಾಶವಾಗುವುದುಂಟು. ಶೃಂಗಾರ ರಸವೇ ಮುಖ್ಯವಾಗಿದ್ದ ಕಥೆ ಕಾದಂಬರಿಗಳನ್ನು ಓದುವುದರಿಂದಲೂ, ಅಂಥ ನಾಟಕ, ಶಿನೇಮಾಗಳನ್ನು ನೋಡುವುದರಿಂದಲೂ, ಸ್ತ್ರೀ ಸಂಬಂಧವಾಗಿ ಚಿಂತಿಸುವುದು, ಸ್ತ್ರೀ ರೂಪಲಾವಣ್ಯವನ್ನು ಕುರಿತು ವರ್ಣಿಸುವುದು, ಸ್ತ್ರೀಯರ ಸಂಗಡ ಆಡುವುದು, ಸ್ತ್ರೀಯರನ್ನು ಪಾಪದೃಷ್ಟಿಯಿಂದ ನೋಡುವುದು, ಇವೇ ಮೊದಲಾದ ಅನಾಚಾರಗಳಿಂದಲೂ, ಅನೇಕ ತರುಣರ ಮನಸ್ಸು ಚಂಚಲವಾಗಿ ಅವರು ವಿಷಯಾಭಿಲಾಷೆಯುಳ್ಳವರಾಗುತ್ತಾರೆ. ಆಗ ಸ್ವಪ್ನಾವಸ್ಥೆಯಲ್ಲಿ ವೀರ್ಯವು ನಾಶವಾಗಲಾರಂಭಿಸುತ್ತದೆ. ಇದರಿಂದಲೂ ಮನುಷ್ಯನು ನಿರ್ಬಲನೂ ರೋಗಿಯೂ ಆಗುತ್ತಾನೆ. ಇದೊಂದು ಭಯಂಕರವಾದ ರೋಗವೇ ಸರಿ.

ಕೆಲವು ನಿರಪರಾಧಿಗಳಾದ ಹುಡುಗರು ಇನ್ನೊಂದು ರೀತಿಯಿಂದಲೂ ವೀರ್ಯಭ್ರಷ್ಟರಾಗುತ್ತಾರೆ. ಇದಕ್ಕೆ ಅವರ ತಾಯಿ ತಂದೆಗಳ ಅನಾಚಾರವೇ ಕಾರಣವು. ತಾಯಿ ತಂದೆಗಳಿಗೆ ವ್ಯಭಿಚಾರದ ಅಥವಾ ಅತಿ ಸಂಭೋಗದ ಇಲ್ಲವೆ ವೀರ್ಯನಾಶದ ಇನ್ನಾವ ಸಂಬಂಧವಾದ ರೋಗವಿದ್ದರೂ ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಮೂತ್ರದಲ್ಲಿಯೂ, ಮಲದಲ್ಲಿಯೂ ವೀರ್ಯ ನಾಶವಾಗುತ್ತದೆ.

ಪ್ರಶ್ನೆ—ಯಾವ ರೀತಿಯಿಂದಲೂ ವೀರ್ಯವನ್ನು ಕಳೆದುಕೊಳ್ಳದೆ ೨೫ ವರ್ಷಗಳ ವರೆಗೆ ಅದನ್ನು ರಕ್ಷಿಸಿ ಆಮೇಲೆ ಲಗ್ನವಾದರೆ ನಿರೋಗಿಯಾಗಿಯೂ, ದೃಢದೇಹಿಯಾಗಿಯೂ, ಇರಬಹುದಲ್ಲವೇ ?

ಉತ್ತರ—ಯಾರು ೨೫ ವರ್ಷಗಳ ವರೆಗೆ ವೀರ್ಯವನ್ನು ಸಕಲ ರೀತಿಗಳಿಂದಲೂ ಸಂರಕ್ಷಿಸುತ್ತಾರೆಯೋ ಅವರು ಧನ್ಯರೇ ಸರಿ. ಅವರು ಅನೇಕ ವಿಪತ್ತುಗಳಿಂದ ಪಾರಾದರೆಂದು ಧಾರಾಳವಾಗಿ ಹೇಳಬಹುದು. ಆದರೆ ಅಷ್ಟರಿಂದಲೇ ವೀರ್ಯರಕ್ಷಣೆಯ ಕಾರ್ಯವು ಪೂರೈಸಿತೆಂದು ತಿಳಿಯಬಾರದು. ವೈದಿಕ ಧರ್ಮದಲ್ಲಿ ನಾಲ್ಕು ಆಶ್ರಮಗಳು ಹೇಳಲ್ಪಟ್ಟಿವೆಯಷ್ಟೆ. ಅವುಗಳಲ್ಲಿ ಬ್ರಹ್ಮಚರ್ಯ, ವಾನಪ್ರಸ್ಥ, ಮತ್ತು ಸನ್ಯಾಸ ಈ ಮೂರು ಆಶ್ರಮಗಳಲ್ಲಿಯೂ ವೀರ್ಯವನ್ನು ರಕ್ಷಿಸಿ ಗೃಹಸ್ಥಾಶ್ರಮದಲ್ಲಿ ಮಾತ್ರ ಅದನ್ನು ಕ್ರಮವರಿತು ಉಪಯೋಗಿಸುವುದು ಧರ್ಮವಾಗಿದೆ.

ಗೃಹಸ್ಥಾಶ್ರಮದಲ್ಲಿ ಕೂಡಾ ವೀರ್ಯವನ್ನು ಕೇವಲ ವಿಷಯೋಪಭೋಗಕ್ಕಾಗಿ ವಿನಿಯೋಗಿಸುವುದು ಮಹಾಪಾಪ ಕೃತ್ಯವಾಗಿದೆ. ಕೇವಲ ಸಂತಾನಪ್ರಾಪ್ತಿಗಾಗಿಯೇ ಕಾಲವರಿತು ವೀರ್ಯವನ್ನುಪಯೋಗಿಸಬೇಕು. ಚಿಕ್ಕಂದಿನಿಂದಲೂ ಕಾಪಾಡಿಕೊಂಡು ಬಂದ ಆ ಮಹಾ ತೇಜಸ್ವಿಯಾದ ವೀರ್ಯವನ್ನು ಮನಸ್ಸಿಗೆ ಬಂದಂತೆ ಹಾಳುಮಾಡುವುದು ಧರ್ಮವಲ್ಲ. ಹಾಗೆ ಮಾಡಿದರೆ ವೀರ್ಯನಾಶದಿಂದಾಗುವ ಕೇಡುಗಳು ತನಗೂ, ತನ್ನ ಹೆಂಡರು ಮಕ್ಕಳಿಗೂ, ತಪ್ಪದೇ ಬರುತ್ತವೆ.

ಪ್ರಶ್ನೆ—ವಿವಾಹಿತರು ಈ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು ?

ಉತ್ತರ—ಪತ್ನಿಯು ಮುಟ್ಟಾದಂದಿನಿಂದ ಹದಿನಾರು ದಿವಸಗಳಲ್ಲಿ ಮೊದಲನೆಯ ನಾಲ್ಕು ದಿವಸಗಳು ಅನಂತರ ಹನ್ನೊಂದನೆಯ ಮತ್ತು ಹದಿಮೂರನೆಯ ದಿವಸಗಳು ಈ ಪ್ರಕಾರ ಆರು ದಿವಸಗಳು ನಿಷಿದ್ಧ ದಿನಗಳಾಗಿವೆ. ಇನ್ನುಳಿದ ಹತ್ತು ದಿವಸಗಳಲ್ಲಿ ಒಂದು ದಿವಸ ಮಾತ್ರ ಗರ್ಭಾದಾನಕ್ಕೆ ಅಧಿಕಾರವಿದೆಯೋ ವಿನಾ ಯಿಕ್ಕುಳಿದ ಕಾಲದಲ್ಲಿ ವೀರ್ಯವನ್ನು ನಾಶಮಾಡಿದರೆ ವಿಷಯೋಪಭೋಗಕ್ಕೆ ವಶವಾದಂತೆಯೇ ಸರಿ. **ಗರ್ಭಧಾರಣವಾದ ಮೊದಲುಗೊಂಡು ಮಗುವು ಹುಟ್ಟಿ ಆ ಮಗು ತಾಯಿಯ ಮೊಲೆಯನ್ನು ಬಿಡುವವರೆಗೂ ಎಂದರೆ ಸಾಧಾರಣ ಮೂರು ವರ್ಷಗಳ ವರೆಗೂ ವೀರ್ಯವನ್ನು ರಕ್ಷಿಸುವುದೇ ಗೃಹಸ್ಥನ ಧರ್ಮವಾಗಿದೆ.**

ವಿವಾಹದ ಪವಿತ್ರ ಉದ್ದೇಶವನ್ನರಿಯದೆ ಕೇವಲ ವಿಷಯೋಪಭೋಗಕ್ಕಾಗಿಯೇ ಲಗ್ನವಾಗಿದ್ದೇವೆಂದು ತಿಳಿದು ಯಾರು ವಿಷಯ ಲಂಪಟರಾಗುತ್ತಾರೆಯೋ ಅವರು ವೀರ್ಯನಾಶದ ಮಹಾ ಪಾಪ ಕೃತ್ಯವನ್ನು ಮಾಡುತ್ತಿದ್ದಾರೆಂದೇ ತಿಳಿಯಬೇಕು. ಅಯ್ಯೋ ! ಈ **ಅತಿ ಸಂಭೋಗದಿಂದ ಜನಾಂಗವು ಬೆಂದು ಬೆಂಡಾಗುತ್ತಲಿದೆ.** ವಿವಾಹದ ಪವಿತ್ರತೆಯು ನಾಶವಾಗಿ ವಿಷಯೋಪಭೋಗದ ಅಪವಿತ್ರತೆಯು ಅದಕ್ಕೆ ಈಗ ಪ್ರಾಪ್ತವಾಗಿದೆ. ಹೇಳಲಸಹ್ಯವಾದ ನಡತೆಯು ಮಿತಿಮೀರಿ ನಡೆಯುತ್ತದೆ. **ಈ ಪಾಪದಿಂದಲೇ ಈಗ ಜನಾಂಗವು ಸುಟ್ಟು ಸುಣ್ಣವಾಗಿ ನಾನಾ ದುಃಖಗಳಿಂದ ಬಳಲುತ್ತಲಿದೆ.**

ಗೃಹಸ್ಥನು ಕೊನೆಯವರೆಗೂ ಅದೇ ಆಶ್ರಮದಲ್ಲಿರುವುದು ಧರ್ಮವಲ್ಲ. ಮುಂದಿನ ವಾನಪ್ರಸ್ಥ ಮತ್ತು ಸನ್ಯಾಸಾಶ್ರಮಗ

ಳನ್ನು ಸ್ವೀಕರಿಸಬೇಕು. ಆದರೆ ಈ ಪವಿತ್ರ ಪದ್ಧತಿಯು ಈಗ ಸಂಪೂರ್ಣ ಲೋಪವಾಗಿದೆ. ಮರಣಾಂತ್ಯದವರೆಗೂ ಕೇವಲ ಸಂಸಾರ ಲಂಪಟದಲ್ಲಿಯೇ ಬಿದ್ದು ಹೊರಳಾಡುತ್ತಿರುವವರೇ ಅತ್ಯಧಿಕ. ಮಕ್ಕಳನ್ನು ಹೆರುವುದಕ್ಕೆ ಮಿತಿಯೇ ಇಲ್ಲ. ಇದೊಂದು ಜೀವಮಾನದ ಮುಖ್ಯ ಕೆಲಸವಾಗಿಯೇ ಪರಿಣಮಿಸಿದೆ. ಈ ಪದ್ಧತಿಯನ್ನು ಕುರಿತು **ಸ್ವಾಮಿ ರಾಮತೀರ್ಥ**ರವರು ಹೇಳಿರುವುದೇನೆಂದರೆ:—

"ಯಾರು ಸಂತಾನೋತ್ಪತ್ತಿಯಲ್ಲಿಯೇ ಆಸಕ್ತರಾಗಿದ್ದಾರೆಯೋ ಮತ್ತು ಕೇವಲ ಕ್ಷಣಿಕ ಸುಖಕ್ಕಾಗಿ ವೀರ್ಯವನ್ನು ಬೇಕಾದಾಗ ಹಾಳುಮಾಡಲು ಸಿದ್ಧರಾಗಿರುತ್ತಾರೆಯೋ ಅವರಿಗೆ ಧಿಕ್ಕಾರವಿರಲಿ!"

ಈ ಅನಾಚಾರವು ಈಗ ಅತ್ಯಧಿಕವಾಗಿರುವುದರಿಂದ ಅಲ್ಪಾಯುಗಳೂ, ನಿರ್ಬಲರೂ, ಅಜ್ಞರೂ, ಆದ ಜನಗಳು ಅತ್ಯಧಿಕವಾಗಿ ಜೀವನಾರ್ಥದ ಪ್ರಯತ್ನಕ್ಕೆ ಬಹು ಭಯಂಕರ ಸ್ವರೂಪವು ಪ್ರಾಪ್ತವಾಗಿದೆ. ಆದಕಾರಣ ಜನಾಂಗವು ನಾನಾವಿಪತ್ತುಗಳಿಗೀಡಾಗಿದೆ.

ಈ ವಿಷಯದಲ್ಲಿ ಪಶುಗಳಿಂದಲೂ ಮನುಷ್ಯನು ಈಗ ಕಲಿಯಬೇಕಾಗಿದೆ. ಅವು ಕೂಟ ಕಾರ್ಯವನ್ನು ಕಾಲವರಿತು ಮಾತ್ರ ಮಾಡುತ್ತವೆಯೇ ವಿನಾ ಅನೇಕ ಜನಗಳಂತೆ ವಿಷಯೋಪಭೋಗಕ್ಕೀಡಾಗುವುದಿಲ್ಲ. ವೀರ್ಯ ರಕ್ಷಣೆಯ ಈ ಪವಿತ್ರ ಕಾರ್ಯವನ್ನು ಗೃಹಸ್ಥರು ಎಲ್ಲಿಯವರೆಗೂ ಆಚರಿಸುವುದಿಲ್ಲವೋ ಅಲ್ಲಿಯವರೆಗೂ ಜನಾಂಗದಲ್ಲಿ ಸುಖಶಾಂತಿಗಳು ನೆಲೆಸುವುದಿಲ್ಲ. **ಒಂದೇಕಾಲದಲ್ಲಿ ಅತ್ಯಧಿಕವಾದ ಜನಸಂಖ್ಯೆಯೂ, ಸುಖ ಸಮೃದ್ಧಿಯೂ ಒಂದು ದೇಶದಲ್ಲಿ ಕೂಡಿರುವುದು ಸಾಧ್ಯವೇ ಅಲ್ಲ.**

ಆದಕಾರಣ ಬ್ರಹ್ಮಚರ್ಯಾಶ್ರಮದಲ್ಲಿ ಮಾತ್ರ ವೀರ್ಯರಕ್ಷಣೆಯನ್ನು ಮಾಡಿದರೆ ಸಾಲದು. ಗೃಹಸ್ಥಾಶ್ರಮದಲ್ಲಿಯು ಕೂಡಾ ಈ ಮುಂಚೆ ಹೇಳಿದ ಪ್ರಕಾರ ಕೇವಲ ಸಂತಾನೋತ್ಪತ್ತಿಗಾಗಿಯೇ ವೀರ್ಯವನ್ನುಪಯೋಗಿಸಿ ಬೇರೆ ಕಾಲಗಳಲ್ಲಿ ಅದನ್ನು ರಕ್ಷಿಸಬೇಕು.

ಪ್ರಶ್ನೆ—ಜನಸಂಖ್ಯೆಯನ್ನು ಹೆಚ್ಚಿಸಬಾರದೆಂಬ ಉದ್ದೇಶದಿಂದಲೇ ಗೃಹಸ್ಥನು ವೀರ್ಯವನ್ನು ರಕ್ಷಿಸಬೇಕಾಗಿದ್ದರೆ ಈಗ ಪಾಶ್ಚಾತ್ಯದೇಶಗಳಲ್ಲಿರುವ ಕೃತ್ರಿಮೋಪಾಯವನ್ನೇಕೆ ಅವಲಂಬಿಸಬಾರದು ?

ಉತ್ತರ—ಕೇವಲ ಜನಸಂಖ್ಯೆಯನ್ನು ತಡೆಯುವುದಕ್ಕಾಗಿಯೇ ವೀರ್ಯವನ್ನು ರಕ್ಷಿಸಬೇಕೆಂದಲ್ಲ. **ತನ್ನ ಶಾರೀರಿಕ, ಮಾನಸಿಕ ಮತ್ತು ಬೌದ್ಧಿಕ ಉನ್ನತಿಗಾಗಿಯೇ ವೀರ್ಯವನ್ನು ರಕ್ಷಿಸಬೇಕು.** ಬತ್ತಿಯ ಮೂಲಕವಾಗಿ ಎಣ್ಣೆಯು ಹೇಗೆ ಮೇಲಕ್ಕೆ ಹೋಗಿ ಆದು ಪ್ರಕಾಶದಲ್ಲಿ ರೂಪಾಂತರವನ್ನು ಹೊಂದುತ್ತದೆಯೋ ಹಾಗೆಯೇ ವೀರ್ಯಪ್ರವಾಹವು ಊರ್ಧ್ವಮುಖವಾಗಿ ಹೋದರೆ ಅದು ಶಕ್ತಿ, ತೇಜ, ಆನಂದಗಳಲ್ಲಿ ರೂಪಾಂತರ ಹೊಂದುತ್ತದೆ. ಅದಕ್ಕೋಸ್ಕರವಾಗಿಯೇ ವೀರ್ಯವನ್ನು ರಕ್ಷಿಸಬೇಕು. ಹೀಗೆ ಮಾಡುವುದರಿಂದ ಜನಸಂಖ್ಯೆಯೂ ತಾನಾಗಿಯೇ ಮಿತವುಳ್ಳದಾಗುತ್ತದೆ. ವೀರ್ಯವು ಅಧೋಮುಖವಾಗಿ ಅದು ಯಾವಾಗಲೂ ವಿಷಯೋಪಭೋಗಕ್ಕಾಗಿಯೇ ವಿನಿಯೋಗಿಸಲ್ಪಡುತ್ತಾ ಹೋದರೆ ತನ್ನ ಶಾರೀರಿಕ ಮಾನಸಿಕ, ಮತ್ತು ಬೌದ್ಧಿಕ ಶಕ್ತಿಗಳು ಕ್ಷೀಣವಾಗುವುವಲ್ಲದೆ ಜನಸಂಖ್ಯೆಯೂ ಮಿತಿಮೀರಿ **ಬಡತನ, ಕ್ಷಾಮ, ರೋಗ, ಯುದ್ಧಾದಿಗಳಿಂದ** ಜನಾಂಗವು ನಾನಾ ವಿಪತ್ತುಗಳಿಗೀಡಾಗುತ್ತದೆ. ಈಗಿನ ದುಸ್ಥಿತಿಯೇ ಇದಕ್ಕೆ ದೃಷ್ಟಾಂತವಾಗಿಲ್ಲವೇ ?

ಪಾಶ್ಚಾತ್ಯರಲ್ಲಿ ಕೆಲವರಿಗೆ ವಿಷಯೋಪ ಭೋಗವೇನೋ ಬ
ಕಾಗಿದೆ. ಆದರೆ ಆದರಿಂದುಂಟಾಗುವ ಸಂತಾನವು ಮಾತ್ರ ಬೇಕ
ಗಿಲ್ಲ. ಆದುದರಿಂದ ನಾನಾ ಕೃತ್ರಿಮೋಪಾಯಗಳ ಮೂಲಕ ಸ
ಜಾಭಿವೃದ್ಧಿಯನ್ನು ತಡೆಯುತ್ತಿದ್ದಾರೆ. ಆದರೆ ಅದು ಧರ್ಮವ
ಆದರಿಂದ ಜನಾಂಗಕ್ಕೆ ಕ್ಷೇಮವೂ ಇಲ್ಲ. ಆದಕಾರಣ ನಾ
ಆ ಪಾಪಮಾರ್ಗವನ್ನನುಸರಿಸಬೇಕಾಗಿಲ್ಲ. ಗೃಹಸ್ಥಾಶ್ರಮ ಧವ
ವನ್ನನುಸರಿಸಿ ನಡೆದರೆ ನಮಗೆ ಕಲ್ಯಾಣವಾಗುವುದಲ್ಲದೆ ಜನಾಂ
ಕ್ಕೂ ಕ್ಷೇಮವಾಗುತ್ತದೆ.

೩ನೆಯ ಪ್ರಕರಣ.

ವೀರ್ಯರಕ್ಷಣೆಯ ಉಪಾಯ.

ಪ್ರಶ್ನೆ—ಜನಗಳು ಈ ಕಾಲದಲ್ಲಿ ವೀರ್ಯರಕ್ಷಣೆಯ ಕಡ
ಲಕ್ಷಿಸದಿರುವುದೇನೂ ನಿಜ. ಇದರಂತೆಯೇ ಜನರು ಯಾವಾಗಲ
ವಿಷಯಾಸಕ್ತರಾಗಿಯೇ ಇರುವಂತೆ ಕಾಣುತ್ತದೆ. ಪೂರ್ವಕಾಲದ
ಹೇಗಿದ್ದಿತು ?

ಉತ್ತರ—ಪ್ರಾಚೀನಕಾಲದ ಭಾರತೀಯರು ಈಗಿನವರ
ವೀರ್ಯ ಭ್ರಷ್ಟರಾಗುತ್ತಿರಲಿಲ್ಲ. ಅವರ ದೀರ್ಘಾಯುರಾರೋ
ಗಳೇ ಇದಕ್ಕೆ ದೃಷ್ಟಾಂತಗಳಾಗಿವೆ. ಅತಿ ಪ್ರಾಚೀನಕಾಲದ ಸ
ತಿಗಳು ಹಾಗಿರಲಿ. ಈಗ ನೂರಾರು ವರ್ಷಗಳ ಹಿಂದಿನ ಸ್ಥಿತಿ
ಹೇಗಿದ್ದೀತು ? ಈಗಿನವರ ತಾತ ಮುತ್ತಾತರು ಹೇಗಿದ್ದರು ? ಈ

ತಂದೆಯಪ್ಪಾದರೂ ಮಗನು ಬಲಿಷ್ಠನಾಗಿರುತ್ತಾನೆಯೇ ? ಈಗಿನಂತೆ ತಂದೆಯಮುಂದೆ ಮಕ್ಕಳು ಸಾಯುತ್ತಿದ್ದರೇ ? ಹಿಂದಿನ ಜನಗಳು ಮುಪ್ಪುಮುಪ್ಪಾಗಿ ಮರಣ ಪಡುತ್ತಿದ್ದಿಲ್ಲವೇ ? ಪ್ರತಿಯೊಂದು ಮನೆಯಲ್ಲಿಯೂ ಆಗ ಹಣ್ಣು ಹಣ್ಣಾದ ಮುದುಕರಿದ್ದೇ ಇರುತ್ತಿದ್ದರು. ಈಗ ಊರಿಗೆ ಒಬ್ಬಿಬ್ಬರಾದರೂ ಅಂಥ ಮುಪ್ಪಿನವರು ದೊರೆಯುವುದು ದುರ್ಲಭವಲ್ಲವೇ ?

ಹಿಂದಿನವರ ಮೈಕಟ್ಟು ಹೇಗಿದ್ದಿತು ? ಅವರ ಪಚನಶಕ್ತಿಯು ಎಷ್ಟು ಪ್ರಬಲವಾಗಿರುತ್ತಿದ್ದಿತು ? ಅವರು ಎಷ್ಟು ಕಷ್ಟದ ಕೆಲಸಗಳನ್ನು ಹೇಗೆ ಹಗಲಿರಳು ಮಾಡುತ್ತಿದ್ದರು ? ಈಗ ನಾವು ಯಾವ ಸ್ಥಿತಿಯಲ್ಲಿದ್ದೇವೆ ? ನಮ್ಮ ಶಕ್ತಿ, ಕಾಂತಿ, ಉತ್ಸಾಹಗಳು ಎಷ್ಟರಮಟ್ಟಿಗಿವೆ ? ಇವುಗಳನ್ನೆಲ್ಲಾ ನೋಡಿದರೆ ನಮ್ಮ ಪೂರ್ವಜನರು ಈ ಕಾಲದವರಂತೆ ವೀರ್ಯ ಭ್ರಷ್ಟರಾಗಿರಲಿಲ್ಲವೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಇದು ಸಕಲರಿಗೂ ತಿಳಿದ ಸಂಗತಿಯಾಗಿರುವುದರಿಂದ ಹೆಚ್ಚಿಗೆ ಹೇಳಬೇಕಾದುದೇ ಇಲ್ಲ.

ಪ್ರಶ್ನೆ—ಈಗ ನಮ್ಮಲ್ಲಿ ವೀರ್ಯಭ್ರಷ್ಟತೆಯು ಹೆಚ್ಚಲು ಕಾರಣವೇನು ? ಮತ್ತು ಎಂದಿನಿಂದ ಈ ದುಸ್ಥಿತಿಯು ಪ್ರಾರಂಭವಾಯಿತು ?

ಉತ್ತರ—ಮುಸಲ್ಮಾನರು ಈ ದೇಶವನ್ನು ಆಳಲಾರಂಭಿಸಿದಂದಿನಿಂದ ನಮ್ಮ ಆರ್ಯಪದ್ಧತಿಗಳು ಲೋಪವಾಗುತ್ತಾ ಬಂದವು. ಬ್ರಹ್ಮಚರ್ಯದಕಡೆಗೆ ಜನಗಳ ಲಕ್ಷ್ಯವು ಕಡಿಮೆಯಾಯಿತು. ಬಾಲ್ಯವಿವಾಹವು ಪ್ರಚಾರದಲ್ಲಿ ಬಂದಿತು. ತಂಬಾಕು ಸೇದುವ ರೂಢಿಯುಂಟಾಯಿತು. **ತಂಬಾಕು ಒಂದು ವಿಧವಾದ ವಿಷದಂತೆಯೇ**

ಸರಿ. ಇದು ರಕ್ತವನ್ನು ಕೆಡಿಸುತ್ತದೆ. ವೀರ್ಯವನ್ನು ನೀರುಮಾಡುತ್ತದೆ, ಪಚನಶಕ್ತಿಯನ್ನು ಕಡಿಮೆಮಾಡಿ ವೀರ್ಯಭ್ರಷ್ಟತೆಗೆ ಕಾರಣವಾಗುತ್ತದೆ.

ಮುಸಲ್ಮಾನರ ಆಳಿಕೆಯ ನಂತರ ಇಂಗ್ಲೀಷರ ಪ್ರಭುತ್ವವು ಪ್ರಾರಂಭವಾಯಿತಷ್ಟೆ. ಇವರ ಆಳಿಕೆಯಲ್ಲಿ ಕಳೆದ ೫೦ ವರ್ಷಗಳೊಳಗಾಗಿಯೇ ಪಾಶ್ಚಾತ್ಯರ ಅನೇಕ ನಡತೆಗಳು ನಮ್ಮ ದೇಶದಲ್ಲಿ ಬಹು ಪ್ರಸಾರವಾಗಿ ಬ್ರಹ್ಮಚರ್ಯವನ್ನು ಭಂಗಗೊಳಿಸಿದವು. ನಮ್ಮ ಪ್ರಾಚೀನ ಆರ್ಯ ಸಂಸ್ಕೃತಿಯು ಸಂಪೂರ್ಣ ಲೋಪವಾಯಿತು. ಜನಗಳಲ್ಲಿ ಸ್ವೇಚ್ಛಾಚಾರವು ಹೆಚ್ಚಿತು ವ್ಯಕ್ತಿ ಸ್ವಾತಂತ್ರ್ಯವು ದುರುಪಯೋಗವಾಗಲಾರಂಭವಾಯಿತು. ವ್ಯಭಿಚಾರವೃತ್ತಿಯು ಅತ್ಯಧಿಕವಾಗಿ ಬಹು ಭಯಂಕರವಾದ ಗರ್ಮಿ ರೋಗವು ಹಾಲಾಹಲವಿಷದಂತೆ ದೇಶವನ್ನೆಲ್ಲಾ ವ್ಯಾಪಿಸಿತು. ವಿಷಯೋಪಭೋಗದ ಕಡೆಗೆ ಜನರ ಲಕ್ಷ್ಯವು ಹೆಚ್ಚಾಯಿತು. ಮದ್ಯಪಾನವು ಮಿತಿಮೀರಿತು! ಇದೊಂದು ಸುಧಾರಿಸಿದ ಗುರುತಾಗಿಯೂ ಎಣಿಸಲ್ಪಟ್ಟಿತು ! ಬೀಡಿ ಸಿಗರೇಟುಗಳನ್ನು ೫-೬ ವರ್ಷಗಳ ಹಸುಮಕ್ಕಳು ಕೂಡಾ ಸೇದಲಾರಂಭಿಸಿದರು ! ಚಹಾ, ಕಾಫಿ, ಬೀಡಿ, ಮೊದಲಾದ ಉತ್ತೇಜಕ ಪದಾರ್ಥಗಳು ಆದರಾತಿಥ್ಯದ ಶುಭವಸ್ತುಗಳಾದವು !

ನಾನಾ ಉಡುಪುಗಳಿಂದ ಶೃಂಗರಿಸಿಕೊಳ್ಳುವುದು ಸಭ್ಯತೆಯ ಲಕ್ಷಣವಾಯಿತು. ಶೃಂಗಾರ ರಸಭರಿತವಾದ ನಾಟಕ, ಕಥೆ, ಕಾದಂಬರಿಗಳನ್ನೋದುವದು ಇಂಥ ನಾಟಕ, ಶಿನೇಮಾಗಳನ್ನು ನೋಡುವುದು ನಾಗರಿಕತೆಯ ಲಕ್ಷಣಗಳಾದುವು. ನಾಲಿಗೆಯ ರುಚಿಗೆ ದಾಸರಾಗಿ ಬೇಕಾದಾಗ ಬೇಕಾದಲ್ಲಿ ಬೇಕಾದುದನ್ನು ವಿಧಿನಿಷೇಧ

ಗಳಿಲ್ಲದೆ ತಿನ್ನುವುದು ಪ್ರಾರಂಭವಾಯಿತು. ಈ ಪ್ರಕಾರ ಬಹುಜನರು ತಾಮಸ ಮತ್ತು ರಾಜಸ ನಡತೆಗಳಿಂದ ನಡೆಯಲಾರಂಭಿಸಿದ್ದರಿಂದ ಜನಾಂಗದ ರಕ್ತವೇ ಕೆಟ್ಟಿದೆ. ವಿಷಯೋಪಭೋಗಕ್ಕೆ ಉತ್ತೇಜನವನ್ನು ಮಾಡುವಂತಹ ಬಾಹ್ಯಾಡಂಬರದ ಸೌಲಭ್ಯ ಸಲಕರಣೆಗಳು ಎಲ್ಲೆಲ್ಲಿಯೂ ಹೆಚ್ಚುತ್ತಲಿವೆ.

ಈಗಿನ ವಿದ್ಯಾಭ್ಯಾಸದ ಪದ್ಧತಿಯಾದರೋ ಬ್ರಹ್ಮಚರ್ಯ ಭಂಗಕ್ಕೇನೇ ಬಹು ಸಹಾಯವನ್ನು ಮಾಡತಕ್ಕದ್ದಾಗಿದೆ. ನಮ್ಮ ಪ್ರಾಚೀನ ಗುರುಕುಲ ಪದ್ಧತಿಯು ನಾಮಶೇಷವಾಯಿತು. ವಿದ್ಯಾರ್ಥಿಗಳು ಅನವಶ್ಯಕವಾದ ಅನೇಕ ವಿಷಯಗಳ ಭಾರವನ್ನು ಹೊತ್ತುಕೊಂಡು ನಿರ್ವೀರ್ಯರಾಗುತ್ತಿದ್ದಾರೆ. ಬುದ್ಧಿಶಕ್ತಿಗೇನೇ ಪ್ರಾಮುಖ್ಯತೆಯು ಕೊಡಲ್ಪಟ್ಟಿದೆಯೇ ವಿನಾ ದೇಹಶಕ್ತಿಗೆ ಮಹತ್ವವೇ ಇಲ್ಲದಂತಾಗಿದೆ. ಯಾವ ಕಾಲದಲ್ಲಿ ಬ್ರಹ್ಮಚರ್ಯದ ಮಹತ್ವವನ್ನು ತಿಳಿದುಕೊಳ್ಳಲೇಬೇಕಾಗಿದೆಯೋ ಅಂಥ ವಿದ್ಯಾಭ್ಯಾಸದ ಕಾಲದಲ್ಲಿಯೇ ಆ ವಿಷಯವು ಈಗ ತಿಳಿಸಲ್ಪಡುತ್ತಾ ಇಲ್ಲ. ಈ ಕಾಲದ ವಿದ್ಯಾಲಯಗಳಲ್ಲಿ ಎಷ್ಟು ವರ್ಷ ಅಭ್ಯಾಸಮಾಡಿದರೂ ಬ್ರಹ್ಮಚರ್ಯದ ವಿಷಯವಾಗಿ ಒಂದು ಪಂಗ್ತಿಯುಕೂಡ ಅವರ ಅಭ್ಯಾಸದ ಪುಸ್ತಕಗಳಲ್ಲಿರುವುದಿಲ್ಲ. ಈ ಪ್ರಕಾರ ಈಗಿನ ಜನಗಳಲ್ಲಿ ನಾನಾ ದೋಷಗಳೂ, ಲೋಪಗಳೂ, ಇರುವುದರಿಂದ ಜನಾಂಗದಲ್ಲಿ ವೀರ್ಯಭ್ರಷ್ಟತೆಯು ಭಯಂಕರವಾಗಿ ನಡೆಯುತ್ತಾ ಇದೆ.

ಪ್ರಶ್ನೆ—ಈ ದುಸ್ಥಿತಿಯನ್ನು ಯಾರು ನಿವಾರಣೆಮಾಡಬೇಕು? ಮತ್ತು ಹೇಗೆ ಹೊಗಲಾಡಿಸಬೇಕು?

ಉತ್ತರ—ಯಾವ ಅನಾಚಾರಗಳಿಂದ ಈ ಶೋಚನೀಯಸ್ಥಿತಿಯು ನಮಗೆ ಬಂದಿದೆಯೋ ಆ ದುರಾಚಾರಗಳನ್ನೆಲ್ಲಾ ನಾವು ಬಿಟ್ಟು ಬಿಡಬೇಕು. ಮತ್ತು ಜನಗಳು ಈ ಅನಾಚಾರಗಳನ್ನು ಬಿಡುವಂತೆ ಅವರನ್ನು ಎಚ್ಚರಗೊಳಿಸಬೇಕು. **ಈ ಸಂಬಂಧವಾಗಿ ಚಿಕ್ಕಚಿಕ್ಕ ಪುಸ್ತಕಗಳನ್ನು ದೇಶಭಾಷೆಯಲ್ಲಿ ಬರೆಯಿಸಿ ಅತ್ಯಲ್ಪ ಬೆಲೆಗೆ ದೊರೆಯುವಂತೆ ಲಕ್ಷಾಂತರ ಪ್ರತಿಗಳನ್ನು ಪ್ರಕಟಗೊಳಿಸಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಹೆಚ್ಚು ಪ್ರಸಾರಗೊಳಿಸಬೇಕು.** ಒಳ್ಳೆಯ ಉಪದೇಶಕರಿಂದ ಉಪನ್ಯಾಸ, ಕೀರ್ತನ, ಪುರಾಣಗಳ ಮೂಲಕ ಈ ದುರಭ್ಯಾಸಗಳನ್ನು ಬಿಡಿಸಬೇಕು. ಜನಾಂಗದ ಕ್ಷೇಮವನ್ನಿಚ್ಛಿಸುವ ಸಕಲ ಮಹಾಶಯರೂ ಈ ಕಾರ್ಯವನ್ನು ಮಾಡಲಿಕ್ಕೂ ಮಾಡಿಸಲಿಕ್ಕೂ ಸಿದ್ಧರಾಗಬೇಕು. **ಧನಿಕರು ತಮ್ಮ ಧನವನ್ನು ಮತ್ತು ವಿದ್ವಾಂಸರು ತಮ್ಮ ವಿದ್ಯೆಯನ್ನು ಈ ಪವಿತ್ರ ಕಾರ್ಯಕ್ಕುಪಯೋಗಿಸಿ ಜನಾಂಗ ರಕ್ಷಣೆಯ ಪುಣ್ಯಕ್ಕೆ ಭಾಗಿಗಳಾಗಬೇಕು.**

ಕುಟುಂಬದ ಯಜಮಾನರು ಮೊದಲು ತಾವು ಶುದ್ಧಾಚರಣೆಯುಳ್ಳವರಾಗಿ ತಮ್ಮ ಮನೆಯಲ್ಲಿ ತಂಬಾಕು, ಚಹಾ, ಕಾಫಿ, ಶೃಂಗಾರರಸದ ಕಥೆ ಕಾದಂಬರಿ ಮೊದಲಾದ ಬ್ರಹ್ಮಚರ್ಯವನ್ನು ಭಂಗಗೊಳಿಸುವ ಯಾವ ಪದಾರ್ಥಗಳೂ ಬರದಂತೆ ಮಾಡಬೇಕು. ಶೃಂಗಾರದ ನಾಟಕ ಶಿನೆಮಾಗಳನ್ನು ನೋಡಲಿಕ್ಕೆ ತಮ್ಮ ಮನೆಯವರನ್ನು ಕಳುಹಿಸಲೇಬಾರದು. ತಮ್ಮ ಕುಟುಂಬದಲ್ಲಿ ಬಾಲ್ಯವಿವಾಹವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು. ಹುಡುಗರು ೧೨-೧೪ ವರ್ಷದವರಾದೊಡನೆ ಅವರ ಸ್ನೇಹಿತರು ಯಾರೆಂಬುದನ್ನು ನೋಡಿ ಅವರು ಒಳ್ಳೆಯ ಹುಡುಗರ ಸ್ನೇಹವನ್ನು ಮಾಡುವಂತೆ ತಿಳಿಸಬೇಕು. ಅವರಿಗೆ ಬ್ರಹ್ಮಚರ್ಯದ ಮಹತ್ವವನ್ನೂ ದುರಾಚಾರಗಳಿಂದಾಗುವ

ಕೇಡುಗಳನ್ನೂ ಭೀಷ್ಮ, ಭೀಮ, ಮಾರುತಿ, ಮೊದಲಾದ ಮಹಾ ಮಹಾ ಪ್ರತಾಪಶಾಲಿಗಳ ಕಥೆಗಳನ್ನು ಅವರಿಗೆ ಆಗಾಗ್ಗೆ ಹೇಳುತ್ತಿರಬೇಕು.

ಮನೆಯಲ್ಲಿ ಯಾವ ವಿಧವಾದ ಉತ್ತೇಜಕ ಪದಾರ್ಥವನ್ನೂ ಯಾರೂ ಸೇವಿಸಬಾರದು. ಹುಡುಗರು ದೇಹಪುಷ್ಟಿಯ ಕಡೆಗೆ ಲಕ್ಷಿಸುವಂತೆ ಮಾಡಬೇಕು. ತಾವು ಎಷ್ಟೇ ಧನಿಕರಾಗಿದ್ದರೂ ಮಕ್ಕಳಿಗೆ ಸಾದಾ ಊಟವನ್ನೂ, ಉಡುಪನ್ನೂ ಹಾಕಬೇಕು. ಅವರ ಮನಸ್ಸು ಅಂದಚಂದಗಳ ಕಡೆಗೆ ಹೋಗುವಂತೆ ಅವರನ್ನು ಶೃಂಗಾರಗೊಳಿಸಬಾರದು. ಈ ಪ್ರಕಾರ ಮನೆಯ ಯಜಮಾನರು ತಾವೂ ತಮ್ಮ ಕುಟುಂಬದವರೂ ಶುದ್ಧಾಚರಣೆಯವರಾಗುವಂತೆ ಪ್ರಯತ್ನಿಸಬೇಕು.

ಗುರುಗಳು ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬ್ರಹ್ಮಚರ್ಯದ ಮಹತ್ವವನ್ನು ಬೋಧಿಸಬೇಕಲ್ಲದೆ ಈಗಿನ ಅನೇಕ ಅನಾಚಾರಗಳಿಂದಾಗುತ್ತಿರುವ ಅನರ್ಥಗಳನ್ನೂ ಅವರಿಗೆ ತಿಳಿಸಿ ಹೇಳಬೇಕು. **ಪಾಠಶಾಲೆಗಳ ಉಪಾಧ್ಯಾಯರು ಈ ಪವಿತ್ರಕಾರ್ಯವನ್ನು ಮಾಡಿದರೆ ಜನಾಂಗಕ್ಕೆ ಮಹದುಪಕಾರವಾಗುವುದು.** ವಿದ್ಯಾರ್ಥಿಗಳಿಗೆ ಬೋಧಿಸುವ ಉಪಾಧ್ಯಾಯರು ಮಾತ್ರ ತಾವು ಶುದ್ಧಾಚರಣೆಯವರಾಗಿರಲೇಬೇಕು. ಇಲ್ಲದಿದ್ದರೆ ಅವರ ಉಪದೇಶವು ಅಷ್ಟು ಫಲಕಾರಿಯಾಗುವುದಿಲ್ಲ.

ಈ ಪ್ರಕಾರ ಜನಸೇವಕರು, ಮನೆಯ ಯಜಮಾನರು ಮತ್ತು ಉಪಾಧ್ಯಾಯರು ಈ ಪುಣ್ಯಕಾರ್ಯವನ್ನು ಈಗ ಅವಶ್ಯಕವಾಗಿ ಮಾಡಬೇಕಾಗಿದೆ. ಇಲ್ಲದಿದ್ದರೆ ನಮ್ಮ ಜನಾಂಗವು ಮುಂದೆ ಮಹತ್ತರವಾದ ವಿಪತ್ತಿಗೀಡಾಗುವುದು.

ಪ್ರಶ್ನೆ—ಯಾವರೀತಿಯಿಂದಲೇ ಆಗಲಿ, ಈವರೆಗೆ ವೀರ್ಯವನ್ನು ಹಾಳುಮಾಡಿಕೊಂಡಿದ್ದರೆ ಯಾವ ಔಷಧಿಯನ್ನು ತೆಗದುಕೊಳ್ಳಬೇಕು. ? ಮತ್ತು ಹೇಗೆ ನಲಿದುಕೊಳ್ಳಬೇಕು ? ವೀರ್ಯರಕ್ಷಣೆಯ ಉಪಾಯಗಳಾವುವು ?

ಉತ್ತರ—ವೀರ್ಯ ಕ್ಷೀಣತೆಯಿಂದ ನರಳುವವರು ತಾವು ವೀರ್ಯಶಾಲಿಗಳಾಗಬೇಕೆಂದು ಅನೇಕ ಪಾಕ, ಗುಳಿಗೆ, ಲೇಹ ಮೊದಲಾದ ಔಷಧಿಗಳನ್ನು ತೆಗೆದುಕೊಳ್ಳುವುದುಂಟು. ಅವು ವಿಷಯೋಪಭೋಗಕ್ಕೆ ಉತ್ತೇಜಕವಾಗಿ ಪರಿಣಮಿಸಿ ಪುನಃ ವೀರ್ಯಕ್ಷೀಣತೆಗೇನೇ ಕಾರಣವಾಗುತ್ತವೆಯೇ ವಿನಾ ಅವುಗಳಿಂದ ಎಳ್ಳಷ್ಟಾದರೂ ವೀರ್ಯರಕ್ಷಣೆಯಾಗುವುದಿಲ್ಲ. ಆದುದರಿಂದ ಅಂಥ **ಔಷಧಿಗಳ ಪ್ರತಾಪವನ್ನು ಕೇಳಿ ಮೋಸಹೋಗಬಾರದು.** ವೀರ್ಯರಕ್ಷಣೆಗೆ ಅನುಭವಸಿದ್ಧವಾದ ಉಪಚಾರಗಳೂ, ಉಪಾಯಗಳೂ ಉಂಟು. ಅವುಗಳನ್ನು ತಪ್ಪದೇ ಆಚರಿಸಿದರೆ ನಿಶ್ಚಯವಾಗಿಯೂ ವೀರ್ಯರಕ್ಷಣೆಯಾಗುವುದು. **ಮಹಾತ್ಮ ಗಾಂಧಿಯ**ವರು ತಮ್ಮ ಮತ್ತು ತಮ್ಮ ಅನೇಕ ಸ್ನೇಹಿತರ ಅನುಭವದಿಂದ ವೀರ್ಯರಕ್ಷಣೆಯ ಉಪಾಯಗಳನ್ನು ಗೊತ್ತುಮಾಡಿದ್ದಾರೆ. ಅವು ಯಾವುವೆಂದರೆ:—

(೧) ಮಕ್ಕಳನ್ನು ಬಹು ಸಾದಾರೀತಿಯಲ್ಲಿ ಸ್ವಾಭಾವಿಕವಾದ ಪದ್ಧತಿಗಳಿಂದ ಜೋಪಾನಮಾಡಬೇಕು. ಅವರಿಗೆ ಉಷ್ಣ, ಉತ್ತೇಜಕ, ಮಸಾಲೆಯ ಮತ್ತು ಕಾರದ ಪದಾರ್ಥಗಳನ್ನು ಪೇಢೆ ಭರ್ಜಿ, ಪುಠಾಣಿ, ಮಂಡಕ್ಕಿಗಳನ್ನು ತಿನ್ನಲಿಕ್ಕೆ ಕೊಡಬಾರದು. ಅವರ ಮನಸ್ಸನ್ನು ಪವಿತ್ರವಾಗಿಡಬೇಕು.

(೨) ಪತಿ ಪತ್ನಿಯರು ಏಕಾಂತದಲ್ಲಿರುವುದನ್ನು ಬಿಟ್ಟು ಬೇರೆ ಬೇರೆ ಕೋಣೆಗಳಲ್ಲಿರಬೇಕು.

(೩) ಇಂದ್ರಿಯ ನಿಗ್ರಹವು ಅಸಾಧ್ಯವಾದುದೆಂದು ಪತಿಪತ್ನಿಯರು ತಿಳಿಯಬಾರದು. ಮನೋನಿಗ್ರಹವೂ ಅವಶ್ಯಕವಾದ ನಿತ್ಯಾಚಾರಗಳಲ್ಲಿಯೇ ಒಂದಾಗಿದೆ.

(೪) ದೇವರೇ ? ನೀನು ನನ್ನನ್ನು ಪವಿತ್ರವಾಗಿಡು. ಎಂದು ಪ್ರತಿನಿತ್ಯ ಅಂತಃಕರಣಪೂರ್ವಕವಾಗಿ ಪರಮಾತ್ಮನನ್ನು ಪ್ರಾರ್ಥಿಸಿಕೊಂಡರೆ ಮನುಷ್ಯನಲ್ಲಿ ಪವಿತ್ರತೆಯು ಹೆಚ್ಚುತ್ತಾ ಬರುತ್ತದೆ.

(೫) ಮದ್ಯ ಮಾಂಸಗಳನ್ನು ಸೇವಿಸಬಾರದು. ಚಹಾ ಕಾಫಿಗಳನ್ನು ಕುಡಿಯಬಾರದು. ಮಸಾಲೆ ಪದಾರ್ಥಗಳನ್ನು ತಿನ್ನಬಾರದು. ಎಂದೂ ಹೆಚ್ಚಾಗಿ ಊಟಮಾಡಬಾರದು. ಮಿತಾಹಾರಿಗಳಾಗಿರಬೇಕು.

(೬) ದೇಹ ಮತ್ತು ಮನಸ್ಸುಗಳನ್ನು ಯಾವಾಗಲೂ ಯಾವುದಾದರೊಂದು ಸತ್ಕಾರ್ಯದಲ್ಲಿ ತೊಡಗಿಸಿರಬೇಕು.

(೭) ರಾತ್ರೆ ಊಟಮಾಡುವುದನ್ನು ಬಿಡಬೇಕು. ಸಾಯಂಕಾಲದಲ್ಲಿ ಹಗುರವಾದ ಆಹಾರವನ್ನೇ ತೆಗೆದುಕೊಳ್ಳಬೇಕು. ಮಲಗುವಾಗ ಹೊಟ್ಟೆಯು ಬರಿದಾಗಿರಬೇಕು.

(೮) ಜಾಗ್ರತೆ ಮಲಗಿ ಜಾಗ್ರತೆ ಏಳುವ ಪದ್ಧತಿಯನ್ನು ತಪ್ಪದೇ ಆಚರಣೆಯಲ್ಲಿ ತರಬೇಕು.

(೯) ಶೃಂಗಾರರಸದ ನಾಟಕ ಶಿನೇಮಾಗಳನ್ನು ನೋಡ

ಬಾರದು. ಅಂಥ ಕಥೆ ಕಾದಂಬ ಗಳನ್ನು ಒದಬಾರದು. ಮತ್ತು ಆ ಸಂಬಂಧವಾದ ಹರಟೆ ಮಾತುಗಳನ್ನಾಡಬಾರದು.

(೧೦) ಹೆಣ್ಣು ಮಕ್ಕಳನ್ನು ಅಕ್ಕತಂಗಿಯರಂತೆ ಕಾಣಬೇಕು. ಅವರನ್ನು ಪಾಪದೃಷ್ಟಿಯಿಂದ ಎಂದೂ ನೋಡಬಾರದು. ಅವಳು ರೂಪವತಿ, ಇವಳು ಕುರೂಪಿಯೆಂಬ ವಿಚಾರವನ್ನು ಕೂಡಾ ಮಾಡಬಾರದು. ತಮ್ಮ ತಾಯಿ, ಮತ್ತು ಅಕ್ಕತಂಗಿಯರನ್ನು ರೂಪವತಿಯರು ಅಥವಾ ಕುರೂಪಿಗಳೆಂಬ ದೃಷ್ಟಿಯಿಂದ ನೋಡುವ ಮನುಷ್ಯನು ಪಾಪಿಯಾಗುತ್ತಾನೆ.

(೧೧) ಸ್ವಪ್ನಾವಸ್ಥೆಯ ವಿಕಾರಕ್ಕೆ ಭಯಪಡಬೇಕಾದುದಿಲ್ಲ. ಸಶಕ್ತ ಮನುಷ್ಯನು ಪ್ರತಿನಿತ್ಯ ತಣ್ಣೀರಿನಿಂದ ಸ್ನಾನಮಾಡಿ ಈ ರೊಗವನ್ನು ನಿವಾರಣೆ ಮಾಡಿಕೊಳ್ಳಬಹುದು. ಕಾಮೋಪಭೋಗವು ಸ್ವಪ್ನಾವಸ್ಥೆಗಿಂತಲೂ ಎಷ್ಟೋ ಉತ್ತಮವಾದುದೆಂಬುದು ತಪ್ಪು ತಿಳುವಳಿಕೆಯಾಗಿದೆ.

(೧೨) ಜನನೇಂದ್ರಿಯದ ಒಳಭಾಗವನ್ನು ಪ್ರತಿನಿತ್ಯ ತಣ್ಣೀರಿನಿಂದ ೨-೩ ಸಾರೆ ತೊಳೆಯಬೇಕು. ಮತ್ತು ಅದರ ಮೇಲೆ ತಣ್ಣೀರನ್ನು ಧಾರೆಯಾಗಿ ಸುರಿಯಬೇಕು.

ಇವುಗಳಲ್ಲದೆ ಈ ಕೆಳಗಿನ ನಿಯಮಗಳೂ
ವೀರ್ಯರಕ್ಷಣೆಗೆ ಅತ್ಯಾವಶ್ಯಕವಾದವುಗಳಾಗಿವೆ.

———O———

(೧) ರಾತ್ರಿ ನಿದ್ರೆ ಕೆಡಬಾರದು. ಮತ್ತು ಹಗಲು ಮಲಗಬಾರದು.

(೨) ತಂಬಾಕನ್ನು ಯಾವರೀತಿಯಿಂದಲೂ ಸೇದಬಾರದು.

(೩) ಮಲಗುವ ಮುಂಚೆ ಮನಸ್ಸಿನಲ್ಲಿ ಯಾವ ವಿಷಯವು ನಾಟಿರುತ್ತದೆಯೋ ಅದೇ ಸ್ವಪ್ನದಲ್ಲಿ ತೋರುವುದುಂಟು. ಆದಕಾರಣ ಮಲಗುವ ಪೂರ್ವದಲ್ಲಿ ಯಾವುದಾದರೊಂದು ಪವಿತ್ರ ಧರ್ಮಗ್ರಂಥವನ್ನು ಅರ್ಧತಾಸಾದರೂ ಓದಿ ಅನಂತರ ತಮ್ಮ ಭಕ್ತಿಗೆ ಪಾತ್ರವಾದ ಪೂಜ್ಯ ವ್ಯಕ್ತಿಯನ್ನಾಗಲಿ, ದೇವರನ್ನಾಗಲಿ, ಅನನ್ಯಭಾವದಿಂದ ಸ್ಮರಿಸುತ್ತ ಮಲಗಬೇಕು.

(೪) ಪ್ರತಿನಿತ್ಯ ಶುದ್ಧವಾದ ಹವೆಯಲ್ಲಿ ಸಾಕಾಗುವಷ್ಟು ತಪ್ಪದೇ ವ್ಯಾಯಾಮ ಮಾಡಬೇಕು.

(೫) ಮಲಬದ್ಧತೆಗೆ ಅವಕಾಶ ಕೊಡಬಾರದು. ಮಲವಿಸರ್ಜನೆಯು ಸರಿಯಾಗಿ ಆಗಿದಿದ್ದರೆ ವೀರ್ಯಾಶಯದ ಮೇಲೆ ಅದರ ಭಾರಬಿದ್ದು ಸ್ವಪ್ನದಲ್ಲಿ ವೀರ್ಯ ಸ್ಖಲನವಾಗುತ್ತದೆ. ಆದಕಾರಣ ಮಲಬದ್ಧತೆಯಾಗದಂತೆ ಬಹು ಎಚ್ಚರಿಕೆಯಿಂದ ವರ್ತಿಸಬೇಕು.

(೬) ಉರುಳೆಗಡ್ಡೆ, ಬೆಳ್ಳುಳ್ಳಿ, ಕಡ್ಲಿ, ತೊಗರೆಬೇಳೆ, ಕೊಬರಿ, ಈ ಮೊದಲಾದ ಉಷ್ಣ ಮತ್ತು ವಾತಪದಾರ್ಥಗಳನ್ನು ಹೆಚ್ಚು ತಿನ್ನಬಾರದು. ಸಂಪೂರ್ಣ ಬಿಟ್ಟರೆ ಒಳ್ಳೆಯದು.

(೭) ರಾತ್ರೆ ಮಲಗುವುದಕ್ಕೆ ಎರಡು ತಾಸು ಮುಂಚೆ ನೀರು ಮೊದಲಾದ ಯಾವ ಪೇಯ ಪದಾರ್ಥಗಳನ್ನೂ ಕುಡಿಯಬಾರದು. ಏಕೆಂದರೆ, ಅದು ರಾತ್ರೆ ಮೂತ್ರಾಶಯವನ್ನು ತುಂಬಿ ವಿರ್ಯವನ್ನು ಸ್ಥಾನಭ್ರಷ್ಟಗೊಳಿಸುತ್ತದೆ. ಮಲಗುವ ಮುಂಚೆ ತಪ್ಪದೆ ಮೂತ್ರ ವಿಸರ್ಜನೆಯನ್ನು ಮಾಡಬೇಕು.

(೮) ಗಾಳಿಯು ಸರಿಯಾಗಿ ಓಡಾಡದಿರುವಂಥ ಸ್ಥಳದಲ್ಲಿ ಮಲಗಬಾರದು. ಮೈಮೇಲೆ ಬಹು ಭಾರವಾದ ಹೊದಿಕೆಯನ್ನು ಹೊದ್ದುಕೊಳ್ಳಬಾರದು. ಇವುಗಳಿಂದ ಸುಖನಿದ್ರೆಯು ಬಾರದೆ ಸ್ವಪ್ನದಲ್ಲಿ ವೀರ್ಯಭ್ರಷ್ಟವಾಗುವುದುಂಟು.

(೯) ಅಂಗತನಾಗಿ ಎಂದೂ ಮಲಗಬಾರದು. ಹಾಗೆ ಮಲಗಿದರೆ ವೀರ್ಯಾಶಯದ ಮೇಲೆ ಮೂತ್ರಾಶಯದ ಭಾರವಿದ್ದು, ಸ್ವಪ್ನಾವಸ್ಥೆಗೆ ಕಾರಣವಾಗುತ್ತದೆ.

ಈ ರೂಢಿಯನ್ನು ತಪ್ಪಿಸುವುದಕ್ಕೋಸ್ಕರ ನಿದ್ರೆಕಾಲದಲ್ಲಿ ಮರೆತಾದರೂ ಹಾಗೆ ಮಲಗಬಾರದೆಂದು ಬೆನ್ನಿನಹಿಂದೆ ಗಂಟು ಒರುವಂತೆ ತಲೆಗಿಂಬು ಮೊದಲಾದುವುಗಳನ್ನಿಟ್ಟುಕೊಂಡು ಮಲಗಬೇಕು.

ಈ ಒಟ್ಟು ಇಪ್ಪತ್ತೊಂದು ನಿಯಮಗಳನ್ನು ಯಾವ ಪ್ರಕಾರ ಆಚರಿಸುತ್ತಾರೆಯೋ ಆ ಪ್ರಕಾರ ಅವರು ವೀರ್ಯವನ್ನು ರಕ್ಷಿಸುವರೆಂಬುದಕ್ಕೆ ಸಂದೇಹವೇ ಇಲ್ಲ.

ಈ ಪರಮಪವಿತ್ರವಾದ ಬ್ರಹ್ಮಚರ್ಯ ವಿಷಯದ ಕಡೆಗೆ ನಮ್ಮ ಕನ್ನಡನಾಡಿನ ಕ್ಷೇಮವನ್ನಿಚ್ಛಿಸುವ ಮಹಾಶಯರು ಹೆಚ್ಚಾದ ಲಕ್ಷ್ಯವನ್ನು ಕೊಡಲಿ. ಕನ್ನಡ ದೇಶದ ತರುಣರು ಈ ನಿಯಮಗಳನ್ನು ಆಚರಣೆಯಲ್ಲಿ ತಂದು ವೀರ್ಯಶಾಲಿಗಳಾಗಲಿ. ಇಂಥ ಬ್ರಹ್ಮಚಾರಿಗಳು ದೇಶದಲ್ಲಿ ಸುಖಶಾಂತಿಗಳನ್ನುಂಟುಮಾಡಲಿ.

ಮಹಾತ್ಮ ಗಾಂಧಿ

---

(೧) ಬ್ರಹ್ಮಚರ್ಯವ್ರತವನ್ನಾಚರಿಸುವುದರಿಂದ ಹೆಚ್ಚಾದ ಆರೋಗ್ಯಭಾಗ್ಯವು ಲಭ್ಯವಾಗುತ್ತದೆ.

(೨) ಯಾರು ಲಗ್ನವಾಗಿಲ್ಲವೋ ಅವರು ಈ ಕಠಿಣ ಕಾಲದಲ್ಲಿ ವಿವಾಹವಾಗಲೇಬಾರದು. ಒಂದುವೇಳೆ ವಿವಾಹವಾಗದೆ ಇರಲು ಸಾಧ್ಯವೇ ಇಲ್ಲದಿದ್ದರೆ ಆದಷ್ಟು ನಿಧಾನವಾಗಿ ಲಗ್ನವಾಗಬೇಕು. ೨೫ ಅಥವಾ ೩೦ ವರ್ಷಗಳೊಳಗಾಗಿ ಲಗ್ನವಾಗುವುದೇ ಇಲ್ಲವೆಂದು ತರುಣರು ಸಂಕಲ್ಪ ಮಾಡಬೇಕು.

(೩) ವಿವಾಹಿತ ಸ್ತ್ರೀಪುರುಷರಿಗೆ ಸ್ವದೇಶೋನ್ನತಿಯ ಅಪೇಕ್ಷೆಯಿದ್ದರೆ ಮತ್ತು ಈ ನಮ್ಮ ಹಿಂದುಸ್ಥಾನದಲ್ಲಿ ಬಲಶಾಲಿಗಳೂ, ಸುರೂಪಿಗಳೂ ದೃಢದೇಹಗಳೂ, ಆದಂತಹ ಸ್ತ್ರೀಪುರುಷರನ್ನೇ ಎಲ್ಲೆಲ್ಲಿಯೂ ಕಾಣಬೇಕೆಂಬ ಇಚ್ಛೆಯಿದ್ದರೆ ಅವರು ಸದ್ಯದಲ್ಲಾದರೂ ಪ್ರಜೋತ್ಪಾದನೆಯನ್ನು ನಿಲ್ಲಿಸುವರೆಂದು ನಾನು ನಂಬಿದ್ದೇನೆ. ನೂತನ ವಿವಾಹಿತ ಸ್ತ್ರೀಪುರುಷರಿಗೆ ಇದೇ ನನ್ನ ಉಪದೇಶವು.

ಮಹಾಸಾಧು ಎಪಿಕ್ಟೆಟಸ್

ಕ್ರಿಸ್ತಶಕ ಮೊದಲನೆಯ ಶತಮಾನದಲ್ಲಿದ್ದ ಇಟಾಲಿ ದೇಶದ ಎಪಿಕ್ಟೆಟಸ್ ಎಂಬ ಮಹಾ ಸಾಧು ಪುರುಷನು ತಾನು ಲಗ್ನ ಮಾಡಿ ಕೊಳ್ಳದಿದ್ದುದರ ಕಾರಣವನ್ನು ಕುರಿತು ಹೇಳಿರುವುದೇನೆಂದರೆ:—

"ಸದ್ಯದಲ್ಲಿ ನಮ್ಮ ಜನಾಂಗವು ಅತ್ಯಂತ ಹೀನಾವಸ್ಥೆಯಲ್ಲಿದೆ. ಇದನ್ನು ಸುಧಾರಿಸಲು ಪ್ರಯತ್ನಿಸುವವರು ಅನ್ಯ ಯಾವ ವಿಷಯಗಳಲ್ಲಿಯೂ ತಮ್ಮ ಚಿತ್ತವು ಹೋಗದಂತಿರಬೇಕು. ಗೃಹಸ್ಥಾಶ್ರಮವನ್ನು ಸ್ವೀಕರಿಸುವದರಿಂದ ಹೆಂಡರು, ಮಕ್ಕಳ ಮತ್ತು ಬಂಧು ಬಾಂಧವರ ಸಂಬಂಧವಾದ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ಅದನ್ನು ಬಿಡುವುದು ಅನ್ಯಾಯವು. ಆ ಸಂಸಾರದ ಕಾರ್ಯಗಳಲ್ಲಿ ತೊಡಗಿದರೆ ಜನಹಿತಾರ್ಥದ ಕಾರ್ಯವು ಕುಂಠಿತವಾಗುತ್ತದೆ. ಆದುದರಿಂದ ತನ್ನ ಜನಾಂಗಕ್ಕೆ ಹಿತವನ್ನುಂಟುಮಾಡಬೇಕೆಂದಪೇಕ್ಷಿಸುವವನು ಸಂಸಾರ ಸುಖಕ್ಕೆ ಮರುಳಾಗಬಾರದು."

ಹರ್ಡೇಕರ್ ಕೃತ

ರಾಷ್ಟ್ರೀಯ ಗ್ರಂಥಗಳು.

ಶ್ರೀ ಸ್ವಾಮಿ ರಾಮತೀರ್ಥರವರ ಉಪನ್ಯಾಸಗಳು, ನಾಲ್ಕು ಭಾಗಗಳು		೨—೦—೦
ಸ್ವಕರ್ತವ್ಯ ಸಿದ್ಧಾಂತ ಭಾಗ ೧—೨		೦—೮—೦
ಬುದ್ಧಿಯ ಮಾತು	....	೦—೪—೦
ಸತ್ಯಾಗ್ರಹ ಸಮಾಜ ಮತ್ತು ಆಶ್ರಮ ನಿಯಮ	....	೦—೧—೦
ಬ್ರಹ್ಮಚರ್ಯ	....	೦—೧—೦
ಖಾದಿ	....	೦—೧—೬

ಅಂಚೆಯ ವೆಚ್ಚ ಬೇರೆ. ಮೇಲಿನ ಪುಸ್ತಕಗಳಲ್ಲಿ ಪ್ರತಿಯೊಂದು ಅಥವಾ ಒಟ್ಟು ಒಂದು ರೂಪಾಯಿಗಿಂತ ಕಡಿಮೆ ಕ್ರಯದ ...ಕಗಳನ್ನು ವಿ. ಪಿ. ಮೂಲಕ ಕಳುಹಿಸುವುದಿಲ್ಲ.

ವಿಳಾಸ :—

ಬಾಳಪ್ಪ ಬೊಂದಾಡೆ,

ಜನರಲ್ ಮರ್ಚಂಟ್, ದಾವಣಗೆರೆ.

ಆತ್ಮೋನ್ನತಿಗಾಗಿಯೂ, ದೇಶದೇಳಿಗೆಗಾಗಿಯೂ ಸಕಲರೂ ಸದಸ್ಯರಾಗಬೇಕಾ

ಸತ್ಯಾಗ್ರಹ ಸಮಾಜ.

(೧) ಮಹಾತ್ಮ ಗಾಂಧಿಯವರು ಬೋಧಿಸಿರುವ ಸತ್ಯಾ ಹದ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ರಸನೇಂದ್ರಿಯ ನಿಗ್ರ ಅಸ್ತೇಯ (ಕದಿಯದಿರುವುದು), ಅಪರಿಗ್ರಹ (ಸಂಗ್ರಹಿಸದಿರುವು ಸ್ವದೇಶಿ ನಿರ್ಭಯ, ಮತ್ತು ಅಸ್ಪರ್ಶತಾ ನಿವಾರಣೆ, ಈ ಒಂಬ ವ್ರತಗಳನ್ನು ಪ್ರಸಾರಗೊಳಿಸುವುದೇ ಈ ಸಮಾಜದ ಉದ್ದೇ ವಾಗಿದೆ.

(೨) ಧಾರ್ಮಿಕ ವಿಷಯದಲ್ಲಿ ಯಾವ ಮತವನ್ನಾ ರಾಜಕೀಯ ವಿಷಯದಲ್ಲಿ ಯಾವ ಪಂಗಡವನ್ನಾಗಲಿ ಅನುಸರಿ ವವರು ಕೂಡಾ ಈ ಸಮಾಜದ ಸದಸ್ಯರಾಗಬಹುದು.

(೩) ಸದಸ್ಯರು ೧೮ ವರ್ಷಗಳಿಗೆ ಮೇಲ್ಪಟ್ಟವರಾ ಬೇಕು. ವರ್ಷಕ್ಕೆ ಒಂಬತ್ತು ಆಣೆ ಚಂದಾ ಹಣವನ್ನು ಕೊ ಕಾಗುವುದು ಮತ್ತು ಅಹಿಂಸೆ, ಸ್ವದೇಶಿ, ಅಸ್ಪರ್ಶತಾ ನಿವಾ ಈ ಮೂರು ವ್ರತಗಳನ್ನು ಸಮಾಜವು ಗೊತ್ತುಪಡಿಸಿರುವ ಪ್ರ ಮರಣಾಂತ್ಯದವರೆಗೂ ಆಚರಿಸಬೇಕಾಗುವುದು.

ಸೂಚನೆ:—ಈ ವಿಷಯವು ಸತ್ಯಾಗ್ರಹ ಸಮಾಜ ಮ ಆಶ್ರಮ ನಿಯಮ, ಎಂಬ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿ ಟ್ಟಿದೆ. ಒಂದೂವರೆ ಆಣೆಯನ್ನು ಸ್ಟಾಂಪ್ ಮೂಲಕ ಕಳು ದರೆ ಆ ಪುಸ್ತಕವು ಕಳುಹಿಸಲ್ಪಡುವುದು.

ವಿಳಾಸ :—

ಬಾಳಪ್ಪ ಬೊಂದಾಡೆ,

ದಾವಣಗೆ